ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಟಿ-20 ವಿಶ್ವಕಪ್‌ಗೂ ಮುನ್ನ 10 ಪಂದ್ಯ ಬಾಕಿ, ಭಾರತ ತಂಡದಲ್ಲಿ ಬದಲಾವಣೆ ಸಾಧ್ಯತೆ ಕ್ಷೀಣ...

22ನವೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ :251 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಉದ್ಯೋಗದ ಸಂದರ್ಶನದ ಪ್ರಶ್ನೆ : ಬಿಮ್ಮ ಬಿಡುವಿನ ಸಮಯದಲ್ಲಿ ಏನು ಮಾಡ್ತೀರಿ ? » 2


ಅರಸೀಕೆರೆ ಕ್ಷೇತ್ರದಲ್ಲಿ ನೀರಾವರಿ ಕ್ರಾಂತಿ » 3


ಹೆತ್ತೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ » 4

# ನಾಯಕತ್ವ ಬದಲಾವಣೆ ಗದ್ದಲ ಜೋರು

## ಐದು ವರ್ಷ ನಾನೇ ಸಿಎಂ-ಸಿದ್ದರಾಮಯ್ಯ | ದೆಹಲಿಯಲ್ಲಿ ಡಿ.ಕೆ.ಶಿ. ಆಪ್ತ ಶಾಸಕರ ಪರೇಡ್

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಗದ್ದಲ ತೀವ್ರಗೊಳ್ಳುತ್ತಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಣ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ. ದೆಹಲಿಗೆ ಡಿ.ಕೆ. ಶಿವಕುಮಾರ್ ಅವರ ಆಪ್ತ ಶಾಸಕರು ಪರೇಡ್ ನಡೆಸಿದ್ದು, ಹೈಕಮಾಂಡ್ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಮತ್ತೊಂದು ಕಡೆಯಲ್ಲಿ ನಾನೇ ಐದು ವರ್ಷ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಅವರು ಟಾಂಗ್ ನೀಡಲು ಮುಂದಾಗಿದ್ದಾರೆ.

ಸಿದ್ದರಾಮಯ್ಯ ಅವರ ಬದಲಾವಣೆ ಆಗಲಿದೆ ಎಂಬ ಚರ್ಚೆ ಇದೀಗ ಕುತೂಹಲದ ಘಟ್ಟಕ್ಕೆ ತಲುಪಿದೆ. ಸೈಲೆಂಟಾಗಿದ್ದ ಡಿ.ಕೆ. ಶಿವಕುಮಾರ್ ಬಣ ಇದೀಗ ಸಕ್ರಿಯವಾಗಿದೆ. ಸದಾಶಿವನಗರ ಹಾಗು



ಕಾವೇರಿಯಲ್ಲಿ ನಡೆಯುತ್ತಿದ್ದ ಬೆಳವಣಿಗೆ ದೆಹಲಿ ಅಂಗಳಕ್ಕೆ ತಲುಪಿದೆ. ಡಿ.ಕೆ.ಶಿವಕುಮಾರ್ ಹಾಗು ಡಿ.ಕೆ ಸುರೇಶ್ ಮಾರ್ಮಿಕ ಹೇಳಿಕೆಗಳನ್ನು ನೀಡಿದ ಬೆನ್ನಲ್ಲೇ ಅವರ ಆಪ್ತರು ಸಕ್ರಿಯವಾಗಿ, ಡಿ.ಕೆ.ಶಿವಕುಮಾರ್ ಪರವಾಗಿ ಬ್ಯಾಟಿಂಗ್ ಮಾಡಲು ಶುರುಮಾಡಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ದಿಢೀರ್ ಆಗಿ ದೆಹಲಿಗೆ ವರ್ಗಗೊಂಡಿದೆ. ಡಿ.ಕೆ. ಶಿವಕುಮಾರ್ ಅವರ ಆಪ್ತ ಬಳಗದಲ್ಲಿ ಕಾಣಿಸಿಕೊಂಡ ಶಾಸಕರು ಪರೇಡ್ ನಡೆಸಿದ್ದಾರೆ. ಸಚಿವ ಚಲುವರಾಯಸ್ವಾಮಿ ಕೂಡಾ ಈ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ. ಹಲವು ಶಾಸಕರು ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ.

» ನಾಲ್ಕನೇ ಪುಟದಲ್ಲಿ

### ಬಣ ರಾಜಕೀಯ ನನ್ನ ರಕ್ತದಲ್ಲೇ ಇಲ್ಲ : ಡಿ.ಕೆ.ಶಿ.

ನನ್ನ ಹತ್ತಿರ ಯಾವ ಬಣ್ಣವೂ ಇಲ್ಲ. ನಾನು 140 ಶಾಸಕರಿಗೆ ಅಧ್ಯಕ್ಷ, ನನಗೆ 140 ಜನರೂ ಪ್ರಮುಖ. ನಾನು ಯಾವ ಗುಂಪನ್ನೂ ಕರೆದುಕೊಂಡು ಹೋಗಲು ಇಷ್ಟವಿಲ್ಲ, ಬಣ ರಾಜಕೀಯ ನನ್ನ ರಕ್ತದಲ್ಲೇ ಇಲ್ಲವೆಂದು ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಶಾಸಕರು ಹೈಕಮಾಂಡ್ ನಾಯಕರ ಭೇಟಿಗೆ ದೆಹಲಿಗೆ ತೆರಳಿರುವ ಬಗ್ಗೆ ಪ್ರತಿಕ್ರಿಯಿಸಿ, ಕಳೆದ ಎರಡೂವರೆ ವರ್ಷಗಳಿಂದ ಸಾಕಷ್ಟು ಔತಣಕೂಟ ನಡೆದಿದೆ. ನಾಲ್ವರು ಡಿಸಿಎಂ ಮಾಡಬೇಕು, ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಿಸ ಬೇಕು. ಸಂಪುಟಕ್ಕೆ ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಸಾಕಷ್ಟು ಡಿನ್ನರ್ ಸಭೆ ನಡೆದಿವೆ. ಸಚಿವರ ಔತಣಕೂಟ ಕೂಡ ಅದರ ಒಂದು ಭಾಗವೇ ಇದು ಎಂದು ಹೇಳಿದರು.

### ನಾಯಕತ್ವ ಬದಲಾವಣೆ ಮಾತನಾಡಬೇಡಿ

ನಾಯಕತ್ವ ಬದಲಾವಣೆಯ ಚರ್ಚೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಪಕ್ಷದ ಶಾಸಕರು ಮತ್ತು ನಾಯಕರಿಗೆ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಸಾರ್ವಜನಿಕವಾಗಿ ಯಾವುದೇ ಹೇಳಿಕೆಗಳನ್ನು ನೀಡದಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಎಚ್ಚರಿಕೆ ನೀಡಿದ್ದಾರೆ. ಅಭಿವೃದ್ಧಿ, ಸರ್ಕಾರದ ಭರವಸೆ ದುರ್ಬಲಗೊಳಿಸುವುದು ಬಿಜೆಪಿಯ ಉದ್ದೇಶವಾಗಿದೆ. ಕೆಲವು ಕಾಂಗ್ರೆಸ್ ನಾಯಕರು ಮತ್ತು ಶಾಸಕರ ಅನಗತ್ಯ ಹೇಳಿಕೆಗಳು ಸಹ ಊಹಾಪೋಹಗಳಿಗೆ ಕಾರಣವಾಗಿದೆ. ಹೀಗಾಗಿ ನಾಯಕತ್ವ ಬದಲಾವಣೆ ಬಗ್ಗೆ ಅನಗತ್ಯ ಹೇಳಿಕೆಗಳನ್ನು ನೀಡಬೇಡಿ ಎಂದು ತಿಳಿಸಿದ್ದಾರೆ.

# ಇಂದು ಜೆಡಿಎಸ್ ರಜತ ಮಹೋತ್ಸವ

## ಧ್ವಜಾರೋಹಣ ನೆರವೇರಿಸಿದ ದೇವೇಗೌಡ, ಕುಮಾರಸ್ವಾಮಿ

• ಪ್ರಜೋದಯ ವರದಿ

**ಬೆಂಗಳೂರು:** ಜೆಡಿಎಸ್ ಪಕ್ಷಕ್ಕೆ 25 ವರ್ಷಗಳು ತುಂಬಿರುವ ಹಿನ್ನಲೆ ಶನಿವಾರ ರಜತ ಮಹೋತ್ಸವ ಹಾಗು ಪಕ್ಷದ ರಾಷ್ಟ್ರಿಯ ಪರಿಷತ್ ಮತ್ತು ರಾಷ್ಟ್ರಿಯ ಸಮಾವೇಶಕ್ಕೆ ಜೆ.ಪಿ.ಭವನ ದಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳ ಲಾಗಿದೆ.



ಶುಕ್ರವಾರ ಸಂಜೆ ಜೆ.ಪಿ.ಭವನ ದಲ್ಲಿ ಸೇವಾದಳದ ವತಿಯಿಂದ ಪಕ್ಷದ ಧ್ವಜಾರೋಹಣವನ್ನು ಜೆಡಿಎಸ್ ರಾಷ್ಟ್ರಿಯ ಅಧ್ಯಕ್ಷ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ,ಕೇಂದ್ರ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ಅವರು ನೆರವೇರಿಸಿ ಚಾಲನೆ ನೀಡಿದರು.

ಬಳಿಕ ರಾಜ್ಯ ಪರಿಷತ್, ರಾಷ್ಟಿಯ ಪರಿಷತ್ ವಿವಿಧ ರಾಜ್ಯಗಳಿಂದ ಬಂದಿರುವ ಪ್ರತಿನಿಧಿಗಳ ಜೊತೆ ದೇವೇಗೌಡರು, ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಸಭೆ ನಡೆಯಿತು. ಕೋರ್ ಕಮಿಟಿ ಅಧ್ಯಕ್ಷರು, ಸದಸ್ಯರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು ಭಾಗಿದ್ದರು.

**ಶಾಸಕಾಂಗ ಪಕ್ಷದ ಸಭೆ**

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದ ಹಿನ್ನಲೆ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಅಧಿವೇಶನದ ಸಂದರ್ಭದಲ್ಲಿ ಜನಪರ ವಿಚಾರಗಳ ಬಗ್ಗೆ ಸದನದ ಒಳ ಹೊರಗು ಪಕ್ಷ ಧ್ವನಿ ಎತ್ತಿ ಬೆಳಕು ಚೆಲ್ಲುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು.

ಕಬ್ಬು ಬೆಳಗಾರರ ಸಮಸ್ಯೆ, ಮೆಕ್ಕೆಜೋಳದ ಬೆಲೆ ಕುಸಿತ, ರೈತರ ಆತ್ಮಹತ್ಯೆ, ಅತಿವೃಷ್ಟಿ, ನೆರೆ ಹಾವಳಿಗೆ ಬೆಳೆ ಪರಿಹಾರ ನೀಡದಿರುವುದು ಸೇರಿ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಬಗ್ಗೆ ವರಿಷ್ಠರು ಶಾಸಕರಿಗೆ ಮಾರ್ಗದರ್ಶನ ಮಾಡಲಿದ್ದಾರೆ. ನ.25ರಂದು ತುಂಗಭದ್ರಾ ಜಲಾಶಯದಿಂದ ರೈತರ ಎರಡನೇ ಬೆಳೆಗೆ ನೀರು ಬಿಡದಿರುವ ವಿಚಾರವನ್ನು ವಿರೋಧಿಸಿ ರೈತರ ಪರವಾಗಿ ಹೋರಾಟ ನಡೆಸಲು ಜೆಡಿಎಸ್ ತೀರ್ಮಾನಿಸಿದೆ.

ಶನಿವಾರ ಬೆಳಿಗ್ಗೆ 11ಗಂಟೆಗೆ ಪಕ್ಷದ ರಜತ ಮಹೋತ್ಸವ ಹಾಗು ರಾಷ್ಟ್ರಿಯ ಮಹಾ ಅಧಿವೇಶನ ನಡೆಯಲಿದೆ. ಪಕ್ಷದ ರಾಷ್ಟ್ರಿಯ ಅಧ್ಯಕ್ಷರಾದ ದೇವೇಗೌಡರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಪಕ್ಷದ ರಾಷ್ಟ್ರಿಯ ಪದಾಧಿಕಾರಿಗಳು ವಿವಿಧ ರಾಜ್ಯಗಳ ರಾಜ್ಯಾಧ್ಯಕ್ಷರು ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪಕ್ಷದ ಸಂಘಟನೆ, ಮುಂಬರುವ ಚುನಾವಣೆಗಳ ಸಿದ್ಧತೆ, ಪ್ರಸಕ್ತ ರಾಜಕೀಯ ವಿಚಾರಗಳ ಅವಲೋಕನ ಮಾಡಲಾಗುತ್ತದೆ. ಜನಪರ ಹೋರಾಟಗಳನ್ನು ಹಮಿಕೊಳ್ಳುವುದು. ನೂತನ ರಾಜ್ಯಾಧ್ಯಕ್ಷರ ಆಯ್ಕೆಯ ಬಗ್ಗೆಯೂ ಚರ್ಚೆ ನಡೆದು ಅಂತಿಮ ನಿರ್ಧಾರವಾಗುವ ಸಾಧ್ಯತೆಗಳಿವೆ.

# ಸಂಸದರ ಅನುದಾನದಲ್ಲಿ ಹಲವು ಕಾಮಗಾರಿಗೆ ಚಾಲನೆ

## ಶಾಲೆ, ನೀರಿನ ಘಟಕ, ರಸ್ತೆ ಅಭಿವೃದ್ಧಿಗೆ ಶ್ರೇಯಸ್ ಪಟೇಲ್ ಭೂಮಿಪೂಜೆ

• ಪ್ರಜೋದಯ ವರದಿ

**ಹಾಸನ:** ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಸಂಸದ ಶ್ರೇಯಸ್ ಪಟೇಲ್ ಶುಕ್ರವಾರ ಜಿಲ್ಲೆಯ ವಿವಿಧೆಡೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ದಂಡಿಗನಹಳ್ಳಿ ಹೋಬಳಿ ಆನೆಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಅಗತ್ಯ ಸೌಕರ್ಯಗಳನ್ನು ಒದಗಿಸುವುದು ನಮ್ಮ ಮೊದಲ ಆದ್ಯತೆ. ಶೀಘ್ರವಾಗಿ ಕಾಮಗಾರಿ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿ ಹಾಗು ಗುತ್ತಿಗೆದಾರರಿಗೆ ಸೂಚಿಸಿದರು.

ಬಳಿಕ ದಂಡಿಗನಹಳ್ಳಿ ಹೋಬಳಿ ಸಾಗತವಳ್ಳಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಹಾಗು ನೊರನಕ್ಕಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಪಕ್ಷದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.



ಯಲಿಯೂರು ಗ್ರಾಮದ ಕುಂದೂರು ಮಠ ರಸ್ತೆಯಿಂದ ಲಕ್ಷ್ಮಣಪುರಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿಯನ್ನು ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಅನುದಾನದಡಿ ಕೈಗೊಂಡಿದ್ದು ಭೂಮಿ ಪೂಜೆ ನೆರವೇರಿಸಿದರು.

ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಗೆ ಸೇರಿದ ಕಾಚೇನಹಳ್ಳಿ ಹಾಗು ಹೊನ್ನಶೆಟ್ಟಿಹಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಶ್ರೇಯಸ್ ಅವರು, ಗ್ರಾಮೀಣ ಮೂಲಸೌಕರ್ಯ ಸುಧಾರಣೆಯತ್ತ ಮತ್ತೊಂದು ಹೆಜ್ಜೆ ಇಡುವ ಅವಕಾಶ ಸಿಕ್ಕಿರುವುದು ಸಂತೋಷದ ವಿಷಯ. ಅಭಿವೃದ್ಧಿ ಕಾರ್ಯಗಳ ಮೂಲಕ ಗ್ರಾಮಗಳ ಅಭಿವೃದ್ಧಿ ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಿರಂತರವಾಗಿರುತ್ತದೆ ಎಂದು ಭರವಸೆ ನೀಡುತ್ತೇನೆಂದರು.

ಊರಿನ ರಸ್ತೆ ಕಾಮಗಾರಿ ಕೈಗೊಳ್ಳುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದರು. ಸಮಸ್ಯೆಯನ್ನು ಆದ್ಯತೆಯಾಗಿ ಪರಿಗಣಿಸಿ ಕೆಲಸ ಕೈಗೆತ್ತಿಕೊಂಡಿದ್ದು, ಆದಷ್ಟು ಬೇಗ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡ ಲಾಗುವುದೆಂದು ತಿಳಿಸಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ಹಾಗು ಹೊಳೆನರಸೀಪುರ ವಿಧಾನ ಸಭಾ ಕ್ಷೇತ್ರಕ್ಕೆ ಸೇರುವ ಬರಗೂರು ಗ್ರಾಮದ ಅರಸೀಕೆರೆ ರಸ್ತೆಯಿಂದ ಬರಗೂರು ರಸ್ತೆಗೆ ಸಂಪರ್ಕಿಸುವ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ, ನಿಗದಿತ ಅವಧಿಯೊಳಗೆ ಕಾಮಗಾರಿ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗು ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.

# ಮಹಾನಗರ ಪಾಲಿಕೆ ವಾರ್ಡ್ ವಿಂಗಡಣೆ ಯಾವಾಗ?

## ಹೊಸ ವಾರ್ಡ್ ರಚನೆ ಬಳಿಕವಷ್ಟೇ ಮೀಸಲಾತಿ ಪ್ರಕಟ ಸಾಧ್ಯ | ಇಲ್ಲದಿದ್ದರೆ ಚುನಾವಣಾ ಪ್ರಕ್ರಿಯೆ ವಿಳಂಬ

• ಪ್ರಜೋದಯ ವರದಿ

**ಹಾಸನ :** ಹಾಸನ ಮಹಾನಗರ ಪಾಲಿಕೆ ಚುನಾಯಿತ ಸದಸ್ಯರ ಅಧಿಕಾರಾವಧಿ ಮುಕ್ತಾಯಗೊಂಡು, ಮತ್ತೊಂದು ಚುನಾವಣೆಗೆ ಅಣಿಯಾಗುತ್ತಿದ್ದರೂ ವಾರ್ಡ್ ವಿಂಗಡಣೆ, ಹೊಸ ವಾರ್ಡ್‌ಗಳು ರಚನೆಯಾಗದಿರುವುದು ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ.

ಚುನಾಯಿತ ಆಡಳಿತ ಮಂಡಳಿ ಅಧಿಕಾರಾವಧಿ ಪೂರ್ಣಗೊಂಡ ಹಿನ್ನಲೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಸರ್ಕಾರ ರಾಜ್ಯಪಾಲರ ಆಜ್ಞಾನುಸಾರ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರು ಮಹಾನಗರ ಪಾಲಿಕೆಗೆ ಆಡಳಿತಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಇನ್ನೇನು ಕೆಲ ದಿನಗಳಲ್ಲಿ ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಳಿಸಿ ಮೊದಲ ಹೆಜ್ಜೆಯಾಗಿ ವಾರ್ಡ್ ಮೀಸಲಾತಿ ಪ್ರಕಟಿಸಬೇಕಿದೆ.

ಆದರೆ, ನಗರಸಭೆಯಿಂದ ಮೇಲ್ದರ್ಜೆಗೇರಿರುವ ಮಹಾನಗರ ಪಾಲಿಕೆ ವಾರ್ಡ್ ವಿಂಗಡಣೆ ಪ್ರಕ್ರಿಯೆಯೇ ಇದುವರೆಗೂ ಆರಂಭಗೊಳ್ಳದಿರುವುದು ಯಾವ ಬಡಾವಣೆ ಎಲ್ಲಿಗೆ ಸೇರುತ್ತದೆ, ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಗ್ರಾಮಗಳು ಯಾವ ವಾರ್ಡ್‌ಗೆ ಒಳಪಡುತ್ತದೆ ಎಂಬುದೇ ಮತದಾರರಿಗೆ ಹಾಗು ಆಕಾಂಕ್ಷಿಗಳಿಗೆ ತಿಳಿಯದಾಗಿದೆ.




### ಶೀಘ್ರ ಕ್ರಮ ವಹಿಸಲು ಒತ್ತಾಯ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ ಚುನಾವಣಾ ದೃಷ್ಟಿಕೋನದಲ್ಲಿ ಐದು ನಗರ ಪಾಲಿಕೆಗಳ ವಾರ್ಡ್‌ಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅದೇ ರೀತಿ ಹಾಸನ ಮಹಾನಗರ ಪಾಲಿಕೆ ವಾರ್ಡ್‌ಗಳನ್ನು ವಿಂಗಡಣೆ ಮಾಡಿ ಅಂತಿಮ ವಾರ್ಡ್ ಮೀಸಲಾತಿ ಪ್ರಕಟಿಸಬೇಕು. ಇಲ್ಲದಿದ್ದರೆ ಚುನಾವಣಾ ಪ್ರಕ್ರಿಯೆ ವಿಳಂಬವಾಗುತ್ತದೆ. ಹೀಗಾಗಿ ಶೀಘ್ರ ಕ್ರಮ ಕೈಗೊಳ್ಳುವಂತೆ ಸದಸ್ಯರು, ಚುನಾವಣಾ ಸ್ಪರ್ಧಾ ಆಕಾಂಕ್ಷಿಗಳು ಒತ್ತಾಯಿಸಿದ್ದಾರೆ.

**ಪಾಲಿಕೆ ವ್ಯಾಪ್ತಿಗೆ ಸೇರಿದ ಗ್ರಾಮಗಳು**

ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಈಗಿನ 35 ವಾರ್ಡ್‌ಗಳು ಮಾತ್ರವಲ್ಲದೆ, ಸುತ್ತಮುತ್ತಲಿನ ಹಲವು ಗ್ರಾಮಗಳನ್ನು ಸೇರ್ಪಡೆ ಗೊಳಿಸಲಾಗಿದೆ. ಸತ್ಯಮಂಗಲ, ಹರಳಹಳ್ಳಿ, ದೊಡ್ಡಹೊನ್ನೇನಹಳ್ಳಿ, ಯಡಿಯೂರು, ಚಿಕ್ಕಹೊನ್ನೇನಹಳ್ಳಿ, ತಮ್ಲಾಪುರ, ಚಿಕ್ಕಕೊಂಡಗುಳ, ಬಿ.ಕಾಟೀಹಳ್ಳಿ, ಬಿ. ಕಾಟೀಹಳ್ಳಿ ಕೊಪ್ಪಲು, ಸಂಕೇನಹಳ್ಳಿ, ಎಸ್.ಎಂ.ಕೃಷ್ಣನಗರ, ಬೂವನಹಳ್ಳಿ, ಬಿ.ಟಿ.ಕೊಪ್ಪಲು, ಗವೇನಹಳ್ಳಿ, ಗುಡ್ಡೇನಹಳ್ಳಿ, ಗುಡ್ಡೇನಹಳ್ಳಿ ಕೊಪ್ಪಲು, ಮಣಚನಹಳ್ಳಿ, ಯರೇಹಳ್ಳಿ, ವಿಜಯನಗರ ಬಡಾವಣೆ ಹಂತ (1)(2)(3), ದೊಡ್ಡಮಂಡಿಗನಹಳ್ಳಿ, ದೇವರಾಯಪಟ್ಟಣ, ಬಿಟ್ಟಗೋಡನಹಳ್ಳಿ, ಸಂಕಲಾಪುರ, ನಾಗತವಳ್ಳಿ (ಕೈಗಾರಿಕಾ ಪ್ರದೇಶ ಪೂರ್ಣ ಒಳಗೊಂಡು). ತಟ್ಟೆಕೆರೆ ಗ್ರಾಮ ಪಂಚಾಯಿತಿಯ ಹುಲ್ಲೇನಹಳ್ಳಿ, ನಾರೀಹಳ್ಳಿ, ತಟ್ಟೆಕೆರೆ, ಜೆ.ಐ.ತಟ್ಟೆಕೆರೆ, ಹನುಮಂತಪುರ ಗ್ರಾಮ ಪಂಚಾಯಿತಿಯ ಕೊಕ್ಕನಘಟ್ಟ, ಬೂವನಹಳ್ಳಿ ಗ್ರಾಮ ಪಂಚಾಯಿತಿಯ ಬುಸ್ತೇನಹಳ್ಳಿ, ದೊಡ್ಡಗೇಣಿಗೆರೆ ಗ್ರಾಮ ಪಂಚಾಯಿತಿಯ ಕಸ್ತೂರವಳ್ಳಿ, ಕೆಂಚಟ್ಟಹಳ್ಳಿ, ಗೇಕರವಳ್ಳಿ, ಸಮುದ್ರವಳ್ಳಿ (ಕೈಗಾರಿಕಾ ಪ್ರದೇಶ ಪೂರ್ಣ ಒಳಗೊಂಡು) ಬಿ. ಕಾಟೀಹಳ್ಳಿ ಗ್ರಾಮ ಪಂಚಾಯಿತಿಯ ದೊಡ್ಡಪುರ, ಹೂವಿನಹಳ್ಳಿ ಕಾವಲ್ ಗ್ರಾಮ ಪಂಚಾಯಿತಿಯ ಉದ್ದೂರು ಸೇರಿ ಒಟ್ಟು 86.01 ಚದರ ಕಿಲೋ ಮೀಟರ್ ಪ್ರದೇಶವನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಈ ಎಲ್ಲಾ ಗ್ರಾಮಗಳನ್ನು ಒಳಗೊಂಡು ವಾರ್ಡ್‌ಗಳ ಸಂಖ್ಯೆ ಯನ್ನು ಹೆಚ್ಚಿಸಿ, ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಬೇಕಿದೆ. ವಾರ್ಡ್ ವಿಂಗಡಣೆ ಬಳಿಕವಷ್ಟೇ ವಾರ್ಡ್‌ವಾರು ಮೀಸಲಾತಿ ಪ್ರಕಟಗೊಳಿಸಿ, ಚುನಾವಣಾ ಪ್ರಕ್ರಿಯೆ ಪ್ರಾರಂಭ ಮಾಡಬೇಕಿದೆ. ಅಷ್ಟರವರೆಗೆ ಆಡಳಿತಾಧಿಕಾರಿಯೇ ಮುಂದುವರೆಯಲಿದ್ದಾರೆ.

**ಮುಗಿಯದ ಗೊಂದಲ**

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್-3, 4, 500, 501 ಮತ್ತು 503 ಅನ್ವಯ, ಜನಸಂಖ್ಯೆ, ಜನಸಾಂದ್ರತೆ, ವಾರ್ಷಿಕ ಆದಾಯ ಮತ್ತು ಕೃಷಿಯೇತರ ಉದ್ಯೋಗದ ಆಧಾರದ ಮೇಲೆ ರಾಜ್ಯ ಸರ್ಕಾರ 2024 ಏಪ್ರಿಲ್ 18 ರಂದು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಘೋಷಿಸಿ ಆದೇಶ ಹೊರಡಿಸಿತ್ತು. ಪಾಲಿಕೆ ಚುನಾಯಿತ ಆಡಳಿತ ಮಂಡಳಿಯ ಅಧಿಕಾರಾವಧಿ 2025 ಅಕ್ಟೋಬರ್ 28ಕ್ಕೆ ಕೊನೆಗೊಂಡಿತ್ತು. ಈ ಹಿಂದೆ ಅಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟಗೊಳಿಸುವ ಸಂಬಂಧ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಆ ಸಮಯದಲ್ಲಿ ಸಾಕಷ್ಟು ಸಮಯ ವ್ಯರ್ಥವಾಗಿತ್ತು. ನಗರಸಭೆ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಸಮಯದಲ್ಲೂ ಹೆಚ್ಚಿನ ಸಮಯ ಅಧಿಕಾರ ನಡೆಸಲು ಸಾಧ್ಯವಾಗಿಲ್ಲ. ಹೀಗಾಗಿ ತಮ್ಮ ಅಧಿಕಾರಾವಧಿ ವಿಸ್ತರಣೆ ಮಾಡುವಂತೆ ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಈ ನಡುವೆ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದೆ. ಈ ಎಲ್ಲಾ ಬೆಳವಣಿಗೆ ಯಿಂದ ಚುನಾಯಿತ ಸದಸ್ಯರು ತಾವು ಆಯ್ಕೆಯಾದ ದಿನದಿಂದ ಒಂದಲ್ಲ ಒಂದು ರೀತಿಯಲ್ಲಿ ಗೊಂದಲ ಎದುರಿಸಿಕೊಂಡು ತಮ್ಮ ಅಧಿಕಾರಾವಧಿ ಮುಕ್ತಾಯಗೊಳಿಸಿದ್ದಾರೆ. ಇನ್ನೇನು ಮತ್ತೊಂದು ಚುನಾವಣೆಗೆ ಸಿದ್ಧರಾಗಬೇಕೆನ್ನುವಷ್ಟರಲ್ಲಿ ವಾರ್ಡ್ ಮರುವಿಂಗಡಣೆಯಾಗದಿರುವುದು ಮತ್ತಷ್ಟು ಗೊಂದಲಕ್ಕೆ ಸಿಲುಕಿಸಿದೆ.

# ರೈತರಿಗೆ ನೈಸರ್ಗಿಕ, ಸಾವಯವ, ಸಹಜ ಕೃಷಿ ವಿಧಾನ ತಿಳಿಸುತ್ತಿಲ್ಲ

## ಕೃಷಿ ಅಧಿಕಾರಿಗಳು, ವಿಜ್ಞಾನಿಗಳ ವಿರುದ್ಧ ಆರ್.ಪಿ.ವೆಂಕಟೇಶ್ ಮೂರ್ತಿ ಅಸಮಾಧಾನ

• ಪ್ರಜೋದಯ ವರದಿ

**ಹಾಸನ:** ಕೃಷಿ ಇಲಾಖೆ ಅಧಿಕಾರಿಗಳು ಮತ್ತು ವಿಜ್ಞಾನಿಗಳು ರೈತರಿಗೆ ಔಷಧಿ ಹಾಗು ಯಾಂತ್ರೀಕೃತ ಕೃಷಿ ವಿಧಾನಗಳಿಗೆ ಒತ್ತು ನೀಡುತ್ತಿದ್ದಾರೆಯೇ ವಿನಃ ಸಮಗ್ರ, ನೈಸರ್ಗಿಕ, ಸಾವಯವ, ಸಹಜ ಹಾಗು ಜೀವ ಚೈತನ್ಯ ಕೃಷಿ ಪ್ರಯೋಗಕ್ಕೆ ಸಮರ್ಪಕ ಮಾರ್ಗದರ್ಶನ ನೀಡುತ್ತಿಲ್ಲವೆಂದು ಹಿರಿಯ ಪತ್ರಕರ್ತ ಆರ್.ಪಿ. ವೆಂಕಟೇಶ್ ಮೂರ್ತಿ ಅವರು ದೂರಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ




ಮಾತನಾಡಿದ ಅವರು, ಜಿಲ್ಲೆಯಲ್ಲಿ ಅಂದಾಜು 40 ಲಕ್ಷ ತೆಂಗಿನ ಮರಗಳು ವಿವಿಧ ರೋಗಗಳಿಗೆ ತುತ್ತಾಗಿ ಇಳುವರಿ ಕುಸಿಯುತ್ತಿದೆ. ಇದರ ವಿರುದ್ಧ ಸಮಗ್ರ ಪರಿಶೀಲನೆ ಮತ್ತು ಪರ್ಯಾಯ ಪ್ರಯೋಗಾತ್ಮಕ ಬೆಳವಣಿಗೆಗೆ ಉತ್ತೇಜನ ನೀಡುವ ಬದಲು ಅಧಿಕಾರಿಗಳು ಕೇವಲ ರಾಸಾಯನಿಕ ಸಿಂಪಡಣೆಯತ್ತ ರೈತರನ್ನು ಒಯ್ಯುವ ಕಾರ್ಯದಲ್ಲಿ ನಿರತರಾಗಿದ್ದಾರೆಂದು ಆರೋಪಿಸಿದರು.

ಚನ್ನರಾಯಪಟ್ಟಣ ಸೇರಿ ಕೆಲ ರೈತರು ಸಮಗ್ರ ಹಾಗು ನೈಸರ್ಗಿಕ ಕೃಷಿಯಲ್ಲಿ ಯಶಸ್ವಿಯಾದ ಉದಾಹರಣೆಗಳಿದ್ದರೂ, ಅವುಗಳನ್ನು ಮಾದರಿಯಾಗಿ ರೈತರಿಗೆ ಪರಿಚಯಿಸಲು ಇಲಾಖೆಗಳು ಮುಂದಾಗದಿರುವುದು ವಿಷಾದನೀಯ. ನುಗ್ಗೇಹಳ್ಳಿ ಹೋಬಳಿ ಸಂತೆಶಿವರ ಗ್ರಾಮದ ಬಸವರಾಜು ಅವರು ತಮ್ಮ ತೋಟದಲ್ಲಿ 220 ತೆಂಗಿನ ಗಿಡ ಬೆಳೆದಿದ್ದಾರೆ. 960 ಅಡಿಕೆ ಗಿಡ ಇವೆ. ವರ್ಷಕ್ಕೆ 30 ಸಾವಿರ ತೆಂಗಿನ ಕಾಯಿ ಪಡೆಯುತ್ತಿದ್ದು,

» ನಾಲ್ಕನೇ ಪುಟದಲ್ಲಿ

### ಸಂವಿಧಾನ ದಿನಾಚರಣೆ

• ಪ್ರಜೋದಯ ವರದಿ

**ಹಾಸನ :** ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನ.26 ರಂದು ಸಂವಿಧಾನ ದಿನಾಚರಣೆ ನಡೆಸಲು ಉದ್ದೇಶಿಸಲಾಗಿದ್ದು, ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಬೆಳಿಗ್ಗೆ 10 ಗಂಟೆಗೆ ಶಾಲಾ ಮಕ್ಕಳು, ಜನಪ್ರತಿನಿಧಿಗಳು, ಗಣ್ಯರು, ಸಂಘಟನೆಗಳ ಮುಖಂಡರುಗಳು, ಸಾರ್ವಜನಿಕರನ್ನೊಳಗೊಂಡಂತೆ ಸಂವಿಧಾನ ಪುಸ್ತಕ, ಸಂವಿಧಾನ ತತ್ವಗಳ ಪ್ಲೆ ಕಾರ್ಡ್ ಮತ್ತು ರಾಷ್ಟ್ರಧ್ವಜದೊಂದಿಗೆ ಜಾಥಾ ಹೊರಟು ಬೆಳಿಗ್ಗೆ 11 ಗಂಟೆಗೆ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

# ಪಾಲಿಕೆ ಅಧಿಕಾರಿಗಳ ದಾಳಿ: 2 ಟಿಪ್ಪರ್ ಪ್ಲಾಸ್ಟಿಕ್ ವಶ

## ಆಹಾರದಲ್ಲಿ ಹಾನಿಕರ ಟೇಸ್ಟಿಂಗ್ ಪೌಡರ್ ಬಳಕೆ ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ನಿಷೇಧಿತ ಪ್ಲಾಸ್ಟಿಕ್ ಬಳಕೆ ಮತ್ತು ಆಹಾರದಲ್ಲಿ ಹಾನಿಕರ ಟೇಸ್ಟಿಂಗ್ ಪೌಡರ್ ಬಳಕೆಗೆ ಕಡಿವಾಣ ಹಾಕಲು ಮಹಾನಗರ ಪಾಲಿಕೆ ಅಧಿಕಾರಿಗಳು ಶುಕ್ರವಾರ ದಿಢೀರ್ ದಾಳಿ ನಡೆಸಿ, 8 ಅಂಗಡಿಗಳಿಂದ ಎರಡು ಟಿಪ್ಪರ್ ಪ್ಲಾಸ್ಟಿಕ್ ವಸ್ತು ವಶಪಡಿಸಿಕೊಂಡಿದ್ದಾರೆ.

ಬೆಳಿಗ್ಗೆ ಪ್ರಾರಂಭವಾದ ತಪಾಸಣೆ ನಗರದೆಲ್ಲೆಡೆ ನಡೆದಿದ್ದು, ಅನೇಕ ವ್ಯಾಪಾರಸ್ಥರು ನಿಯಮ ಉಲ್ಲಂಘನೆ ನಡೆಸುತ್ತಿರುವುದು ಸ್ಪಷ್ಟಗೊಂಡಿದೆ. ಪಾಲಿಕೆ ತಂಡ ಭೇಟಿ ನೀಡಿದ ಕೇವಲ 8 ಅಂಗಡಿಗಳಲ್ಲೇ ಎರಡು ಟಿಪ್ಪರ್ ತುಂಬುವಷ್ಟು ನಿಷೇಧಿತ ಪ್ಲಾಸ್ಟಿಕ್ ಪತ್ತೆಯಾದದ್ದು, ಪರಿಸ್ಥಿತಿಯ ಗಂಭೀರತೆಯನ್ನು ತೋರಿಸಿದೆ.



ಕೆಲವು ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ನೀಡುವ ಸಾಮಾನ್ಯ ನೀರಿಗೂ ಪ್ಲಾಸ್ಟಿಕ್ ಲೋಟಗಳನ್ನು ಬಳಸಲಾಗುತ್ತಿರುವುದು ಕಂಡುಬಂದಿದೆ. ಇದಲ್ಲದೆ, ಪ್ಲಾಸ್ಟಿಕ್ ಕವರ್, ಕಪ್, ಪ್ಲೇಟ್ ಹಾಗು ಇತರೆ ಏಕಬಳಕೆ ವಸ್ತುಗಳು

» ನಾಲ್ಕನೇ ಪುಟದಲ್ಲಿ

# ಕಣ್ಣಿಗೆ ಖಾರದಪುಡಿ ಎರಚಿ ದರೋಡೆ

• ಪ್ರಜೋದಯ ವರದಿ

**ಅರಸೀಕೆರೆ:** ಕಣ್ಣಿಗೆ ಖಾರದಪುಡಿ ಎರಚಿ, ಚಾಕು ತೋರಿಸಿ ಮಹಿಳೆಯ ಕುತ್ತಿಗೆಯಲ್ಲಿದ್ದ 23 ಗ್ರಾಂ. ಚಿನ್ನದ ಮಾಂಗಲ್ಯ ಸರವನ್ನು ಕಸಿದುಕೊಂಡು ಹೋಗಿರುವ ಘಟನೆ ತಾಲ್ಲೂಕಿನ ಆದಿಹಳ್ಳಿ ಗೇಟ್ ಬಳಿ ನಡೆದಿದೆ.

ಮೂಲತಃ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಮಡೆನೂರು ಗ್ರಾಮದ ತಾರಾ ಎಂಬುವವರು ಅರಸೀಕೆರೆಯ ಶಾಹಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದು, ಅಲ್ಲೇ ಕೆಲಸ ಮಾಡಿಕೊಂಡಿದ್ದ ಸಂಜು ಎಂಬ ಹುಡುಗ ಪರಿಚಯ ಆಗಿದ್ದ. ಆ ಸಮಯದಲ್ಲಿ ಕಷ್ಟ ಇದೆ ಎಂದು ತಾರಾ ಅವರ ಬಳಿ 10 ಸಾವಿರ ರೂ. ಸಾಲ ಪಡೆದುಕೊಂಡಿದ್ದ.

ಸಾಲ ವಾಪಾಸ್ ಕೇಳಿದರೆ ಆಗ ಕೊಡುತ್ತೇನೆ, ಈಗ ಕೊಡುತ್ತೇನೆಂದು ಸುಳ್ಳು ಹೇಳುತ್ತಿದ್ದ. ಸಂಜು ಫೋನ್ ಮಾಡಿ ಅಕ್ಕ ನಿಮಗೆ ಹಣವನ್ನು ಕೊಡುತ್ತೇನೆ ಸಿಗುವಂತೆ ಹೇಳಿದ್ದ. ಕೆಲಸ ಮುಗಿಸಿ ಸಂಜೆ 6.15 ರ ಸುಮಾರಿನಲ್ಲಿ ನಗರದ ಬಸ್ ನಿಲ್ದಾಣದ ಹತ್ತಿರವಿರುವ ಗಾಯತ್ರಿ ಟೆಕ್ಸ್‌ಟೈಲ್ಸ್ ಅಂಗಡಿ ಮುಂದೆ ನಿಂತಿದ್ದಾಗ ಬೈಕಿನಲ್ಲಿ ಬಂದ ಸಂಜು, ಬೇರೆಡೆ ಹಣ ಕೊಡಿಸುವೆ ಎಂದು ಬೈಕ್‌ನಲ್ಲಿ ಕೂರಿಸಿಕೊಂಡು ಅರಸೀಕೆರೆ-ತಿಪಟೂರು ರಸ್ತೆಯಲ್ಲಿ ಪೊನ್ನ ಸಮುದ್ರ ಗೇಟ್ ಸಮೀಪ ಹೋಗಿ, ವಾಪಾಸ್ ಮತ್ತೆ ಅರಸೀಕೆರೆ ಕಡೆ ರಸ್ತೆಗೆ ಬೈಕ್ ತಿರುಗಿಸಿಕೊಂಡು ಆದಿಹಳ್ಳಿ ಗೇಟ್ ಸಮೀಪ ಇರುವ ದಾರಿಯಲ್ಲಿ ಹೋಗುತ್ತಿದ್ದ ವೇಳೆ ಅಪರಿಚಿತ ಯುವಕ ಬೈಕ್ ನಿಲ್ಲಿಸಿ ಫೋನ್ ಮಾಡ ಬೇಕೆಂದು ಮೊಬೈಲ್ ಕೇಳಿದ್ದಾನೆ. ಆಗ ಏಕಾಏಕಿ ಸಂಜು ಕಣ್ಣಿಗೆ ಕಾರದ ಪುಡಿ ಎರಚಿದ್ದಾನೆ. ಸಂಜು ಕೆಳಗೆ ಬಿದ್ದಾಗ ಚಾಕು ತೋರಿಸಿ ಹಣ, ಒಡವೆ ಕೊಡಿ, ಇಲ್ಲವಾದರೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಹೆದರಿಸಿ ದ್ದಾನೆ. ಭಯಗೊಂಡು ತಾರಾ ಕೊರಳಿ ನಲ್ಲಿದ್ದ 23 ಗ್ರಾಂ ತೂಕದ ಚಿನ್ನದ ಸರವನ್ನು ತೆಗೆದುಕೊಟ್ಟಿದ್ದಾರೆ. ಸಂಜು ಮೇಲೂ ಅನುಮಾನಗೊಂಡಿರುವ ಪೊಲೀಸರು ಆತನನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

## ಶ್ರೀ ಚನ್ನಕೇಶವ ದೇವಾಲಯಕ್ಕೆ ಭೇಟಿ ನೀಡಿದ ವಿಧಾನಸಭೆ ಉಪಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ ಒತ್ತಾಯ

# ಬೇಲೂರು, ಹಳೇಬೀಡು ಅಭಿವೃದ್ಧಿಗೆ ಕೇಂದ್ರ ಮುಂದಾಗಲಿ

• ಪ್ರಜೋದಯ ವರದಿ

**ಬೇಲೂರು:** ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿರುವ ಐತಿಹಾಸಿಕ ಶ್ರೀ ಚನ್ನಕೇಶವ ದೇವಾಲಯಕ್ಕೆ ವಿಧಾನಸಭೆ ಉಪಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ ಅವರು ಶುಕ್ರವಾರ ಭೇಟಿ ನೀಡಿ ವೀಕ್ಷಣೆ ಮಾಡಿದರು.

ದೇವಾಲಯದ ಆಡಳಿತ ಮಂಡಳಿ ಮಂಗಳವಾದ್ಯಗಳೊಂದಿಗೆ ರುದ್ರಪ್ಪ ಲಮಾಣಿ ಅವರಿಗೆ ಸ್ವಾಗತ ಕೋರಿದರು. ನಂತರ ಶ್ರೀ ಚನ್ನಕೇಶವಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇಲೂರು-ಹಳೇಬೀಡು ದೇಗುಲ ವಿಶ್ವ ಪ್ರವಾಸಿ ತಾಣ. ಇಂತಹ ತಾಣದ ನಿರ್ವಹಣೆ ಮಾತ್ರ ರಾಜ್ಯ ಸರ್ಕಾರದ್ದು. ಆದರೆ, ಇದರ ಸಂಪೂರ್ಣ ಸರ್ವತೋಮುಖ ಅಭಿವೃದ್ಧಿ ಕೇಂದ್ರ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಬರುವ ಹಿನ್ನಲೆ ಕೇಂದ್ರ ಸರ್ಕಾರ ಐತಿಹಾಸಿಕ ಪ್ರವಾಸಿತಾಣಗಳಿಗೆ ಸಕಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಮುಂದಾಗಬೇಕಿದೆ ಎಂದು ಹೇಳಿದರು.



ನಾನು ಮುಜರಾಯಿ ಸಚಿವರಾಗಿದ್ದ ಸಂದರ್ಭದಲ್ಲಿ ಕೂಡ ಇಂತಹ ಐತಿಹಾಸಿಕ ಶಿಲ್ಪಕಲಾ ದೇಗುಲಕ್ಕೆ ರಾಜ್ಯ ಸರ್ಕಾರದಿಂದ ನೀಡುವ ಬಹುತೇಕ ಸೌಲಭ್ಯ ನೀಡಲಾಗಿತ್ತು. ಆದರೆ, ಕೇಂದ್ರ ಪುರಾತತ್ವ ಇಲಾಖೆ ಮಾತ್ರ ಮೌನಕ್ಕೆ ಜಾರಿದ್ದಾರೆ. ಇಂತಹ ಅಪರೂಪ ಶಿಲ್ಪಕಲಾ ದೇಗುಲಗಳಲ್ಲಿ ಯಾವುದೇ ಹೊಸತನವಿಲ್ಲದೆ ಇಲ್ಲಿನ ಪುರಾತನ ಶಿಲ್ಪಗಳನ್ನು ಉಳಿಸುವ ನಿಟ್ಟಿನಲ್ಲಿ ಕೇಂದ್ರ ಕೆಲಸ ಮಾಡಬೇಕು. ಬೇಲೂರು ಚನ್ನಕೇಶವ ದೇವಾಲಯ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಹೋಯ್ಸಳರ ಶಿಲ್ಪಕಲೆಯ ಜೀವಂತ ನಿದರ್ಶನ. ಇಂತಹ ಐತಿಹಾಸಿಕ ಸ್ಥಳಗಳನ್ನು ಮುಂದಿನ ಪೀಳಿಗೆಗೆ ಉಳಿಸಲು ಎಲ್ಲರೂ ಜವಾಬ್ದಾರಿ ಎಂದು ತಿಳಿಸಿದರು.

ಈ ಹಿಂದೆ ನಾನು ಸಚಿವನಾಗಿದ್ದ ಸಂದರ್ಭದಲ್ಲಿ ವಿಶ್ವ ದರ್ಜೆಗೆ ಏರಿಸಲು ಹಲವು ಯೋಜನೆಗಳನ್ನು ರೂಪಿಸಿದ್ದೆ. ಇದರ ಜೊತೆಯಲ್ಲಿ ಉತ್ತಮ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಚಿಂತನೆ ನಡೆಸಲಾಗಿತ್ತು. ಆದರೆ ಅದು ಇಲ್ಲಿವರೆಗೆ ಏನಾಗಿದೆ ಎಂದು ಅದರ ಬಗ್ಗೆ ಮಾಹಿತಿ ಇಲ್ಲ. ಇಂತಹ ಪ್ರವಾಸಿತಾಣಗಳು ವಿಶ್ವ ಮಾನ್ಯತೆ ಪಡೆದಿದ್ದು, ಅವುಗಳಿಗೆ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳಾಗಬೇಕು. ಅದಲ್ಲದೆ ಈಗಾಗಲೇ ಯುನೆಸ್ಕೋ ವಿಶ್ವ ಪಟ್ಟಿಗೆ ಸೇರಿರುವುದು ಶ್ಲಾಘನೀಯ. ಇದನ್ನು ಹೆಚ್ಚಿನ ರೀತಿಯಲ್ಲಿ ವಿಶ್ವ ದರ್ಜೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇದು ನಮ್ಮ ಖಾಸಗಿ ಕಾರ್ಯಕ್ರಮವಾಗಿದ್ದು ಇಲ್ಲಿ ಯಾವುದೇ ರಾಜಕೀಯ ಬೇಡವೆಂದು ಉತ್ತರಿಸಿದರು.

ಹಿಂದೆ ಹೊಯ್ಸಳ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿದ್ದು, ಅದು ಈಗ ನಿಂತಿರುವ ಬಗ್ಗೆ ನಮ್ಮ ಕಾರ್ಯಕರ್ತರು ನನ್ನ ಗಮನಕ್ಕೆ ತಂದಿದ್ದು ಇಂತಹ ಪ್ರವಾಸಿ ತಾಣಗಳಲ್ಲಿ ಇಂತಹ ಉತ್ಸವ ನಡೆದಾಗ ಅದು ವಿಶ್ವ ಮಾನ್ಯತೆ ಪಡೆಯುತ್ತದೆ. ಅದಕ್ಕೆ ಸರ್ಕಾರ ಇಂತಹ ಉತ್ಸವಗಳನ್ನು ಮುಂದುವರಿಸಬೇಕು. ಇಂತಹ ದೇವಾಲಯಗಳಿಗೆ ಹೊಸತನ ರೂಪ ತರಲು ಹೋಗಬಾರದು.ಇದರ ಸಂಪೂರ್ಣ ನಿರ್ವಾಹಣೆ ರಾಜ್ಯ ಸರ್ಕಾರ ನಿರ್ವಾಹಣೆ ಮಾಡುತ್ತಿದೆ ಇದರ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಎಂದರು.

ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್, ನರಸಿಂಹಪ್ರಿಯ ಭಟ್, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ದೇಗುಲ ಕಾರ್ಯ ನಿರ್ವಹಣಾಧಿಕಾರಿ ಯೋಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಇತರರಿದ್ದರು.

> ಪುರಾತತ್ವ ಇಲಾಖೆ ದೇವಾಲಯ ಈಗ ಹೇಗಿದೆ ಹಾಗೆಯೇ ಉಳಿಸಬೇಕು, ಹೊಸತನ ತರಬಾರದು. ಈಗಿರುವ ಹೊಯ್ಸಳರ ಕಾಲದ ಅಮರಶಿಲ್ಪಿ ಜಕಣಾಚಾರಿ ಕೆತ್ತಿರುವ ಶಿಲ್ಪಕಲೆಗಳನ್ನು ಮುಂದಿನ ಪೀಳಿಗೆಗೆ ನೆನಪಾಗಿ ಉಳಿಸಬೇಕು.
> - ರುದ್ರಪ್ಪ ಮಾನಪ್ಪ ಲಮಾಣಿ, ವಿಧಾನಸಭೆ ಉಪಸಭಾಪತಿ

## ವಿಜಯೇಂದ್ರ ಬದಲಾಗದಿದ್ದರೆ ಹೊಸ ಪಕ್ಷ: ಯತ್ನಾಳ



• ಪ್ರಜೋದಯ ವರದಿ

**ದಾವಣಗೆರೆ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಬದಲಾವಣೆ ಮಾಡದೇ ಇದ್ದರೆ ಹೊಸ ಪಕ್ಷ ಕಟ್ಟುತ್ತೇವೆ. ಬಿಜೆಪಿಯ ನಿಷ್ಠಾವಂತರು ಹೊಸ ಪಕ್ಷಕ್ಕೆ ಬರುತ್ತಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ವಿಜಯೇಂದ್ರ ಬಿಜೆಪಿ ಚುಕ್ಕಾಣಿ ಹಿಡಿದ ಬಳಿಕ ಪಕ್ಷ ದುರ್ಬಲವಾಗಿದೆ. ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಪಕ್ಷ ಹೀನಾಯ ಸೋಲು ಕಂಡಿದೆ. ಹೀಗಾಗಿ, ವಿಜಯೇಂದ್ರ ಬದಲಾವಣೆಗೆ ನಾಯಕರು ಪಟ್ಟು ಹಿಡಿದ್ದಾರೆಂದು ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದರು. ವಿಜಯೇಂದ್ರ ನಾಲ್ಕಾರು ಬೆಂಬಲಿಗರನ್ನು ಜೊತೆಯಲ್ಲಿಟ್ಟುಕೊಂಡು ರಾಜ್ಯ ಸುತ್ತುತ್ತಿದ್ದಾರೆ. ಹಿಂಬಾಲಕರನ್ನು ಮಾತ್ರ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಕೊಂಡಿದ್ದಾರೆ. ಇಂತಹ ಕಾರ್ಯಗಳು ಪಕ್ಷನಿಷ್ಠರಲ್ಲಿ ಬೇಸರ ಮೂಡಿಸಿವೆ ಎಂದರು.

# ಹೆತ್ತೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿಪೂಜೆ

## ಕ್ಷೇತ್ರದಲ್ಲಿ 3 ಕಡೆ ಮಂಜೂರಾತಿ : ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಹೆತ್ತೂರು:** ಸಮಾಜ ಕಲ್ಯಾಣಇಲಾಖೆ ವತಿಯಿಂದ ಹೆತ್ತೂರು ಹೋಬಳಿ ಕೇಂದ್ರದಲ್ಲಿ 75 ಲ.ರೂ ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಶುಕ್ರವಾರ ಹೆತ್ತೂರು ಹೋಬಳಿ ಕೇಂದ್ರದಲ್ಲಿ ನೂತನ ಅಂಬೇಡ್ಕರ್ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸಕಲೇಶಪುರ, ಆಲೂರು ಹಾಗು ಕಟ್ಟಾಯ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ನಿಟ್ಟಿನಲ್ಲಿ ಹೊಸಕೋಟೆ ಹೋಬಳಿ ಕೇಂದ್ರ, ಆಲೂರು ತಾಲ್ಲೂಕು ಅಬ್ಬನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗು ಹೆತ್ತೂರು ಹೋಬಳಿ ಕೇಂದ್ರದಲ್ಲಿ ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ ಎಂದು ಹೇಳಿದರು.

ಹೆತ್ತೂರು ಹೋಬಳಿ ರಾಜ್ಯ ಮತ್ತು ಜಿಲ್ಲಾ ರಾಜಕಾರಣವನ್ನು ನಿರ್ಧರಿಸುವಷ್ಟು ಮಟ್ಟಕ್ಕೆ ಗುರುತಿಸಿಕೊಂಡಿರುವ ಹೋಬಳಿಯಾಗಿದೆ. ಇಲ್ಲಿ ಬೆಳೆಗಾರರ ಸಂಘ, ದಲಿತ ಹೋರಾಟಗಾರರು ಹಾಗು ಪ್ರಗತಿಪರ ರೈತರು, ನ್ಯಾಯಾಧೀಶರು ಇದ್ದಾರೆನ್ನುವುದು ಹೆಮ್ಮೆ ವಿಚಾರ. ಇಲ್ಲಿ ಅಂಬೇಡ್ಕರ್ ಭವನ ನಿರ್ಮಾಣಬೇಕೆಂಬುವುದು ಗ್ರಾಮಸ್ಥರ ಬಹುದಿನಗಳ ಕನಸಾಗಿತ್ತು. ಅದರಂತೆ ಅಂಬೇಡ್ಕರ್ ಭವನ ನಿರ್ಮಾಣ ಕಾರ್ಯ ನಡೆಯಲಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ. ಮತದಾರರು ನೀಡಿದ ಮತವನ್ನು ಕಿಂಚಿತ್ತು ದುರ್ಬಳಕೆ ಮಾಡದೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ ಎಂದರು.



ಕ್ಷೇತ್ರದ ಮೂಲಭೂತ ಸಮಸ್ಯೆಗಳು, ಕಾಡಾನೆ ಹಾವಳಿ, ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಕಾಫಿ ಬೆಳೆಗಾರರು, ರೈತರಿಗೆ ಆಗಿರುವ ನಷ್ಟದ ಕುರಿತು ಕ್ಷೇತ್ರದ ಜನರ ಪ್ರತಿನಿಧಿಯಾಗಿ ವಿಧಾನಸಭೆಯಲ್ಲಿ ಧ್ವನಿ ಎತ್ತುವ ಕೆಲಸವನ್ನು ಮಾಡಿದ್ದೇನೆ. ಕ್ಷೇತ್ರಕ್ಕೆ ಸರ್ಕಾರದಿಂದ ಬರಬೇಕಾಗಿರುವ ಅನುದಾನವನ್ನು ಯಾವುದೇ ರಾಜಿಗೆ ಒಳಗಾಗದೆ ತರುವ ಕೆಲಸವನ್ನು ಮಾಡುತ್ತೇನೆ. ಮಲೆನಾಡಿನಿಂದ ಬಯಲು ಸೀಮೆಗೆ ನೀರೆತ್ತುವ ಎತ್ತಿನಹೊಳೆ ಯೋಜನೆ ಬಹುಪಾಲು ನನ್ನ ಕ್ಷೇತ್ರದಲ್ಲಿ ಕಾಮಗಾರಿ ನಡೆದಿದೆ. ಆದರೆ, ನಾನು ಶಾಸಕನಾಗಿ ಎರಡು ವರ್ಷ ಕಳೆದರೂ ಅನುದಾನ ಬಿಡುಗಡೆಯಾಗದಿರುವುದನ್ನು ಮುಖ್ಯಮಂತ್ರಿ ಹಾಗು ಉಪಮುಖ್ಯಮಂತ್ರಿಯನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ, ಅದರಂತೆ ಇದೀಗ ಸರ್ಕಾರ ಅನುದಾನ ಬಿಡುಗಡೆಯಾಗಿದ್ದು, ಕ್ಷೇತ್ರದಾದ್ಯಂತ ಸದ್ಯದಲ್ಲೇ ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡುತ್ತೇನೆಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಾತನಾಡಿ, ಕಾಮಗಾರಿಗಳಲ್ಲಿ ಪರ್ಸೆಂಟೇಜ್ ಹಾವಳಿಯಿಂದ ಗುಣಮಟ್ಟದ ಕಾಮಗಾರಿ ನೆಡೆಸಲು ಗುತ್ತಿಗೆದಾರರಿಗೆ ಸಾಧ್ಯವಾಗುತ್ತಿಲ್ಲ. ಯಾವುದೇ ಸರ್ಕಾರ ಬಂದರೂ ಶೇ. 40-50 ಪರ್ಸೆಂಟ್ ಕೊಡಲೇಬೇಕು. ಇದರಿಂದ ಗುಣಮಟ್ಟದ ಕಾಮಗಾರಿ ನಡೆಸುವುದಾದರೂ ಹೇಗೆಂದು ವಿಷಾದ ವ್ಯಕ್ತಪಡಿಸಿದರು. ಸಮಾಜ ಸತ್ಯ ಮತ್ತು ಅಶಾಂತಿಯ ಮೇಲೆ ಅವಲಂಬನೆಯಾಗಿದ್ದು, ಅವುಗಳನ್ನು ಜನರು ಮರೆತರೆ ಸಮಾಜ ಉಳಿಯುವುದಿಲ್ಲ. ನನ್ನ ಶಾಸಕ ಅವಧಿ ಯಲ್ಲಿ ಆರಂಭಿಸಿದ್ದ ಅಭಿವೃದ್ಧಿ ಕಾರ್ಯಗಳಿಗೆ ಆ ಕಾಮ ಗಾರಿಗಳ ಉದ್ಘಾಟನಾ ಸಮಯದಲ್ಲಿ ಸ್ಥಾಪನ ಕಲ್ಲು ನಿರ್ಮಾ ಣದಲ್ಲೂ ರಾಜಕೀಯ ಮಾಡಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಇದೇ ವೇಳೆ ಅಂಬೇಡ್ಕರ್ ಭವನ ನಿರ್ಮಾ ಣಕ್ಕೆ ವೈಯಕ್ತಿಕವಾಗಿ 25 ಸಾವಿರ ನೀಡುತ್ತಿದ್ದೇನೆಂದು ತಿಳಿಸಿದರು.

ಹೆತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜ್, ಉಪಾಧ್ಯಕ್ಷರು ಅನುಸೂಯ, ಹೊಂಗಡಹಳ್ಳ ಗ್ರಾ.ಪಂ. ಅಧ್ಯಕ್ಷ ವನಜಾಕ್ಷಿ, ಕೆ.ಆರ್.ಡಿ.ಐ ಇಂಜಿನೀಯರ್ ಅಣ್ಣಯ್ಯ, ಕೆಡಿಪಿ ನಾಮ ನಿರ್ದೇಶನ ಸದಸ್ಯ ಕೋಮಾರಯ್ಯ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್, ಬೆಳಗೋಡು ಕೃಷಿ ಪತ್ತಿನ ಅಧ್ಯಕ್ಷ ಬಸವರಾಜ್, ಗ್ರಾ.ಪಂ ಸದಸ್ಯ ಡಿಲಾಕ್ಷ, ಯಸಳೂರು ವಲಯ ಅರಣ್ಯ ಅಧಿಕಾರಿ ರೇವಣ್ಣ ಸಿದ್ದಯ್ಯ ಹಿರೇಮಠ್ ಇದ್ದರು.

# ಶಿಕ್ಷಣದಲ್ಲಿ ಕ್ರಾಂತಿ ಮಾಡಿದ ಜಿಲ್ಲೆ ಹಾಸನ

• ಪ್ರಜೋದಯ ವರದಿ

**ಹಾಸನ:** ರಾಜ್ಯಮಟ್ಟದವರೆಗೂ ಶಿಕ್ಷಣದಲ್ಲಿ ಕ್ರಾಂತಿ ಮಾಡಿದ ಜಿಲ್ಲೆ ಹಾಸನ. ಶಿಕ್ಷಣವನ್ನು ನೀಡಿದ ಶಿಕ್ಷಣ ಸಂಸ್ಥೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಶಾಸಕ ಸ್ವರೂಪ್ ಪ್ರಕಾಶ್ ಅವರು ತಿಳಿಸಿದ್ದಾರೆ.

ನಗರದ ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ) ವತಿಯಿಂದ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ ಹಾಗೂ ಇತರ ಸಹಪಠ್ಯ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮ ಹಾಗೂ 2024-25ನೇ ಸಾಲಿನ ವಾರ್ಷಿಕ ಸಂಚಿಕೆ ಜ್ಞಾನ ಸೌರಭ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸದರಿ ಕಾಲೇಜಿಗೆ ಅದರಲ್ಲೂ ಹೆಣ್ಣುಮಕ್ಕಳು ಹಳ್ಳಿಯಿಂದ ನಗರಕ್ಕೆ ಬಂದು ವಿದ್ಯಾಭ್ಯಾಸ ಮಾಡುತ್ತಿರು ವುದು ಬಹಳ ಸಂತೋಷದ ವಿಷಯ. ಎಲ್ಲರೂ ಚೆನ್ನಾಗಿ ಓದುವುದರ ಮೂಲಕ ಸಾಧನೆ ಮಾಡಿ ತಮ್ಮ ಕುಟುಂಬ, ನೆರೆಹೊರೆಯವರಿಗೆ ಸಹಾಯವನ್ನು ಮಾಡಬೇಕೆಂದು ತಿಳಿಸಿದರು.

ಸರ್ಕಾರಿ ವಿಜ್ಞಾನ ಕಾಲೇಜು 75ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿದೆ. ವೇದಿಕೆ ಮಾಡಲು ಕಾಲೇಜಿನಲ್ಲಿ ಬೇಡಿಕೆಯನ್ನು ಇಟ್ಟಿದ್ದೀರಿ ಶೀಘ್ರವೇ ಅದಕ್ಕೆ ಗುದ್ದಲಿ ಪೂಜೆಯನ್ನು ಮಾಡಲಾಗುತ್ತದೆ ಎಂದರಲ್ಲದೆ, ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ ಹಾಗಾಗಿ ಹಂತ ಹಂತವಾಗಿ ಈ ಕೆಲಸವನ್ನು ಮಾಡೋಣ ಎಂದು ತಿಳಿಸಿದರು.

ಬೂಕರ್ ಪ್ರಶಸ್ತಿ ವಿಜೇತರಾದ ನಮ್ಮ ಜಿಲ್ಲೆಯ ಲೇಖಕಿ ಬಾನುಮುಸ್ತಾಕ್ ಅವರ ಎದೆಯ ಹಣತೆ ಪುಸ್ತಕವನ್ನು ಎಲ್ಲಾ ವಿದ್ಯಾರ್ಥಿಗಳು ಓದಿ ಎಂದರಲ್ಲದೆ, ಅವರ ರೀತಿಯಲ್ಲಿಯೇ ಎಲ್ಲಾ ಮಕ್ಕಳು ಸಾಧನೆ ಮಾಡಿದೊಡ್ಡ ಮಟ್ಟದಲ್ಲಿ ಬೆಳೆಯಿರಿ ಎಂದು ಹೇಳಿದರು.

ಮಹಾನಗರ ಪಾಲಿಕೆಯ ಮಹಾ ಪೌರರಾದ ಗಿರೀಶ್ ಚನ್ನವೀರಪ್ಪ, ಸಾಹಿತಿಗಳಾದ ಹಂಪನಹಳ್ಳಿ ತಿಮ್ಮೇಗೌಡ, ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತಿರರು ಉಪಸ್ಥಿತರಿದ್ದರು.



# ಕುಂದೂರಿನಲ್ಲಿ ನ.25 ರಿಂದ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರೀಕ್ಷೇತ್ರ ಕುಂದೂರು ಮಠದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಮತ್ತು ಶ್ರೀರಂಗನಾಥ ಸ್ವಾಮಿಯವರ ಜಾತ್ರಾ ಮಹೋತ್ಸವವನ್ನು ನ.25 ರಿಂದ ನ.28 ರವರೆಗೆ ಆಯೋಜಿಸಲಾಗಿದೆ ಎಂದು ಶ್ರೀ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಕುಂದೂರು ಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರವಾಗಿರುವ ಕುಂದೂರು ಕ್ಷೇತ್ರವು ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿದ್ದು ಭಕ್ತರು, ಯಾತ್ರಿಕರು ಮತ್ತು ಪ್ರವಾಸಿಗರನ್ನು ಕೈಬೀಸಿ ಕರೆಯುವ ನಿಸರ್ಗ ರಮಣೀಯ ಸುಂದರ ತಾಣವಾಗಿದೆ ಎಂದರು.

ಕ್ಷೇತ್ರದ ಪ್ರಧಾನ ದೇವತೆ ಶ್ರೀ ಮೆಳಿಯಮ್ಮ ದೇವಿ, ಶ್ರೀರಂಗನಾಥ ಸ್ವಾಮಿ, ಶ್ರೀ ಈಶ್ವರ ಹಾಗೂ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಹಾಗೂ ಸಹಪರಿವಾರ ದೇವತೆಗಳ ಹಾಗೂ ಶ್ರೀ ಕ್ಷೇತ್ರ ಕುಂದೂರು ಮಠದ ಇಂದಿನ ಪೀಠಾಧ್ಯಕ್ಷರುಗಳ ಸ್ಮರಣೆಯೊಂದಿಗೆ ನಾಲ್ಕು ದಿನಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ತಿಳಿಸಿದರು.

ಶ್ರೀ ಕುಂದೂರು ಮಹಾ ಸಂಸ್ಥಾನ ಮಠದ ಇತಿಹಾಸವು ಪುರಾಣ ಪ್ರಸಿದ್ಧವಾದ ಪುಣ್ಯ ಕ್ಷೇತ್ರವಾಗಿದೆ. ಇಲ್ಲಿ ಹಲವಾರು ದೇವರುಗಳು ಸ್ಥಾಪನೆಗೊಂಡಿದ್ದು, ವಿಶೇಷವಾಗಿ ಶಕ್ತಿರೂಪಿಣಿಯಾಗಿರುವ ಆದಿಶಕ್ತಿ ಶ್ರೀ ಮೆಳಿಯಮ್ಮ ದೇವಿಯು ಸುತ್ತ-ಮುತ್ತಲ ಹಲವಾರು ಗ್ರಾಮಗಳಿಗೆ ಅಧಿದೇವತೆಯ ಪುಣ್ಯ ನೆಲೆಯಾಗಿದೆ. ಹುತ್ತದ ರೂಪದಲ್ಲಿ ನೆಲೆಸಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಷಷ್ಠಿ ನಿಮಿತ್ತವಾಗಿ ಜಾತ್ರಾ ಮಹೋತ್ಸವವು ಸಾವಿರಾರು ವರ್ಷಗಳಿಂದ ನಡೆಯುತ್ತಿದ್ದು, ಈ ವರ್ಷವೂ ವಿಜೃಂಭಣೆಯಿಂದ ನೆರವೇರಲಿದೆ ಎಂದರು.

ಜಾತ್ರಾ ಮಹೋತ್ಸವಕ್ಕೆ ಈ ಬಾರಿ ವಿಶೇಷಧಾರ್ಮಿಕಕಾರ್ಯಕ್ರಮಗಳು, ಪೂಜೆ-ಹವನ, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿ ಹಲವಾರು ವಿಧಿ-ವಿಧಾನಗಳನ್ನು ಜರುಗಿಸಲು ಮಠವು ಸಕಲ ತಯಾರಿಗಳನ್ನು ನಡೆಸಿದೆ ಎಂದು ತಿಳಿಸಿದರು.

ಶ್ರೀ ಡಾ.ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರ ನೇತೃತ್ವದಲ್ಲಿ ಮಂಗಳವಾರ ಪ್ರಾತಕಾಲದಿಂದ ಶ್ರೀ ಗಣಪತಿ ಹೋಮ, ವಾಸ್ತು ಹೋಮ, ಮೃತ್ಯುಂಜಯ ಹೋಮ, ದುರ್ಗಾ ಹೋಮ, ಪೂರ್ಣಹುತಿ, ಮಹಾ ಮಂಗಳಾರತಿ, ಲಲಿತ ಸಹಸ್ರನಾಮ ಲಲಿತ ತ್ರಿಶತಿ, ಸುಮಂಗಲಿಯರಿಂದ ಸಾಮೂಹಿಕಕುಂಕುಮಾರ್ಚನೆ ಹಾಗೂ ಪರಮಪೂಜ್ಯ ಶ್ರೀಗಳವರಿಂದ ಧರ್ಮ ಧ್ವಜಾರೋಹಣ ಹಾಗೂ ರಥಕ್ಕೆ ನವ ಕಲಶಾರೋಹಣ ನಡೆಯಲಿದೆ.

ಬುಧವಾರ ಸಂಜೆ 4:30ಕ್ಕೆ ಉಪವಾಸ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ರಥೋತ್ಸವ ಹಾಗೂ ಸರ್ಪೋತ್ಸವ ನಂತರ ಧಾರ್ಮಿಕ ಸಮಾರಂಭ, ಗುರುವಾರ ಶ್ರೀ ರಂಗನಾಥ ಸ್ವಾಮಿಯವರ ರಥೋತ್ಸವ ಮತ್ತು ಗರುಡೋತ್ಸವ ಹಾಗೂ ಶುಕ್ರವಾರದಂದು ಶ್ರೀ ಕ್ಷೇತ್ರ ಕುಂದೂರು ಮಹಾ ಸಂಸ್ಥಾನ ಮಠದ ಹಿಂದಿನ ಪೀಠಾಧ್ಯಕ್ಷರುಗಳ ಪುಣ್ಯಾರಾಧನೆ ಹಾಗೂ ಗುರು ಸಂಸ್ಮರಣೋತ್ಸವ ನಡೆಯಲಿದೆ ಎಂದು ತಿಳಿಸಿದರು.

# ಮೂಲಭೂತ ಸೌಕರ್ಯ ಒದಗಿಸುವುದು ಸರ್ಕಾರದ ಕರ್ತವ್ಯ

## 54 ಲಕ್ಷ ರೂ. ವೆಚ್ಚದ ಮರು ಡಾಂಬರೀಕರಣಕ್ಕೆ ಚಾಲನೆ | ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಪ್ರತಿಯೊಬ್ಬರಿಗೂ ಭೂಮಿ, ವಸತಿ, ಕುಡಿ ಯುವ ನೀರು ಸೇರಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕು ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸತ್ತಿಗಲ್‌ನಿಂದ ಅರಕೆರೆ ಬಿ.ಬಿ. ಶಿವಪ್ಪ ವೃತ್ತದವರೆಗೆ 54 ಲಕ್ಷ ರೂ. ವೆಚ್ಚದ ಮರು ಡಾಂಬರೀಕರಣ ಕಾಮಗಾರಿಗೆ ಶುಕ್ರವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದ ಸಮೀಪ ಇರುವ ಅರೆಕೆರೆ ಗ್ರಾಮ ಕುಗ್ರಾಮವಾಗಿದ್ದು ಇಲ್ಲಿನ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಬದ್ಧನಾಗಿದ್ದೇನೆ. ಗ್ರಾಮದ ರಸ್ತೆ, ಚರಂಡಿ, ಕುಡಿಯುವ ನೀರು ಮತ್ತು ವಿದ್ಯುತ್‌ಗೆ ಪ್ರಮುಖ ಆದ್ಯತೆ ನೀಡಲಾ ಗುವುದೆಂದು ತಿಳಿಸಿದರು.

ಸರ್ಕಾರದಿಂದ ಅನುದಾನ ತಂದು ಎಲ್ಲಾ ನಾಗರಿಕರಿಗೂ ಅವಶ್ಯವಿರುವ ಮೂಲ ಸೌಕರ್ಯ ಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸರ್ಕಾರದಿಂದ ಬಂದ ಸಣ್ಣಪುಟ್ಟ ಅನುದಾನದಲ್ಲಿ ಕ್ಷೇತ್ರದ ಹೆಚ್ಚು ಅವಶ್ಯಕವಾಗಿರುವ ರಸ್ತೆಗಳ ಪಟ್ಟಿ ಮಾಡಿ ಯಾವುದೇ ತಾರತಮ್ಯ ಮಾಡದೇ ಅಭಿವೃದ್ಧಿಪಡಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ ತಾಲ್ಲೂಕಿನಾದ್ಯಂತ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೆಗೆತ್ತಿಕೊಳ್ಳಲಾಗುವುದು. ಈಗಾಗಲೇ ರಸ್ತೆ ಅಭಿವೃದ್ಧಿ ಕಾಮಗಾರಿ ಕುರಿತಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಾಮಗಾರಿ ಗುಣಮಟ್ಟಕ್ಕೆ ಹೆಚ್ಚು ಆದ್ಯತೆ ನೀಡುವಂತೆ ತಿಳಿಸಲಾಗಿದೆ. ಯಾವುದೇ ಹಂತದಲ್ಲೂ ಕಾಮಗಾರಿಯ ಗುಣಮಟ್ಟದ ಕಳಪೆಯಾಗದಂತೆ ಎಚ್ಚರಿಕೆ ವಹಿಸ ಬೇಕು ಎಂದರು.



ಬಿಜೆಪಿ ಮುಖಂಡ ಎ.ವಿ.ನರೇಶ್ ಮಾತನಾಡಿ, ಈ ಭಾಗದಲ್ಲಿ ಅಂದಿನ ಶಾಸಕರಾದ ಬಿ.ಬಿ. ಶಿವಪ್ಪ ಅವರ ಕಾಲದಲ್ಲಿ ಅಭಿವೃದ್ಧಿ ಕಂಡಿತ್ತು. ತದನಂತರ ಬಂದಂತಹ ಯಾವುದೇ ಜನಪ್ರತಿ ನಿಧಿಗಳು ಮೂಲ ಸೌಕರ್ಯ ಒದಗಿಸಲು ಇಚ್ಛಾಶಕ್ತಿ ಹೊಂದಿರಲಿಲ್ಲ ಹಾಗಾಗಿ ಈ ಗ್ರಾಮ ನಗರದಿಂದ ಕೂದಲಳೆ ಅಂತರದಲ್ಲಿದ್ದರೂ ಅಭಿವೃದ್ಧಿ ಕಾಣದೆ ಕುಗ್ರಾಮದಂತಿತ್ತು. ಇದೀಗ ಶಾಸಕ ಸಿಮೆಂಟ್ ಮಂಜು ಅವರ ಸರಳ ಸಜ್ಜನಿಕೆ ವ್ಯಕ್ತಿತ್ವ ಹಾಗು ಜನರಿಗೆ ಮೂಲ ಸೌಕರ್ಯ ಒದಗಿಸಬೇಕೆಂಬ ಬದ್ಧತೆಯಿಂದ ಬ್ಯಾಕರವಳ್ಳಿ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದಾರೆಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ರಂಗನಾಥ್, ಸದಸ್ಯರಾದ ನಂದೀಶ್, ಸರಿತಾ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯೆ ರುಕ್ಮಿಣಿ, ಬಿಜೆಪಿ ಶಕ್ತಿ ಕೇಂದ್ರ ಅಧ್ಯಕ್ಷ ಕಾರ್ತಿಕ್, ಬಿಜೆಪಿ ಬೂತ್ ಅಧ್ಯಕ್ಷ ಚಿರಂತ್, ಪ್ರಸನ್ನ, ಕುಮಾರಸ್ವಾಮಿ ದಿನೇಶ್, ಅರೆಕೆರೆ ಇಂದನ್ ಇದ್ದರು.

## ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್: ಸೆಮಿಸ್‌ಗೆ ಲಕ್ಷ್ಯಸೇನ್

**ಸಿಡ್ನಿ:** ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಲಕ್ಷ್ಯ ಸೇನ್ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಶ್ರೇಯಾಂಕಿತರಾದ ಲಕ್ಷ್ಯ, ಭಾರತದವರೇ ಆದ 20 ವರ್ಷದ ಆಯುಷ್ ಶೆಟ್ಟಿ ವಿರುದ್ಧ 23-21, 21-11ರ ಅಂತರದಲ್ಲಿ ಗೆದ್ದು ಅಂತಿಮ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದ್ದಾರೆ. ಈ ನಡುವೆ ಪುರುಷರ ಡಬಲ್ಸ್ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಎಂಟರ ಘಟ್ಟದಲ್ಲಿ ಎಡವಿದ್ದಾರೆ.

ಸಾತ್ವಿಕ್-ಚಿರಾಗ್ ಜೋಡಿಯು ಐದನೇ ಶ್ರೇಯಾಂಕದ ಇಂಡೋನೇಷ್ಯಾದ ಫಜರ್ ಅಲ್ಫಿಯನ್ ಹಾಗೂ ಮುಹಮ್ಮದ್ ಶೋಹಿಬುರ್ ಫಿಕ್ರಿ ವಿರುದ್ಧ 21-19, 21-15ರ ಅಂತರದಲ್ಲಿ ಮಣಿದು ಕೂಟದಿಂದಲೇ ನಿರ್ಗಮಿಸಿದ್ದಾರೆ. ಹಾಂಕಾಂಗ್ ಓಪನ್ ಮತ್ತು ಚೀನಾ ಮಾಸ್ಟರ್ಸ್ ಟೂರ್ನಿಗಳಲ್ಲಿ ಸಾತ್ವಿಕ್-ಚಿರಾಗ್ ಜೋಡಿಯು ಫೈನಲ್‌ಗೆ ಪ್ರವೇಶಿಸಿತ್ತು.

# ನಾಯಕತ್ವ ಬದಲಾವಣೆ ಗದ್ದಲ ಜೋರು

» ಮೊದಲನೇ ಪುಟದಿಂದ

**ಸಿದ್ದರಾಮಯ್ಯ ಖಡಕ್ ಸಂದೇಶ**

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ, ಶಾಸಕರ ದೆಹಲಿ ಪ್ರವಾಸದ ನಡುವೆಯೇ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದರು ಸಿದ್ದರಾಮಯ್ಯ ಅವರು ಖಡಕ್ ಹೇಳಿಕೆ ನೀಡಿದ್ದಾರೆ. ಐದು ವರ್ಷ ನಾನೇ ಮುಖ್ಯಮಂತ್ರಿ ಅಷ್ಟೇ ಅಲ್ಲ, ಮುಂದಿನ 2 ಬಜೆಟ್‌ಗಳನ್ನು ನಾನೇ ಮಂಡಿಸುತ್ತೇನೆಂದು ಹೇಳುವ ಮೂಲಕ ಸಂದೇಶ ರವಾನೆ ಮಾಡಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನರ್ ರಚನೆ ಬಗ್ಗೆ ಪಕ್ಷದ ವರಿಷ್ಠರು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಾರೆ. ವರಿಷ್ಠರ ತೀರ್ಮಾನಕ್ಕೆ ಪಕ್ಷದ ಪ್ರತಿಯೊಬ್ಬರೂ ಬದ್ಧರಾಗಿರಬೇಕು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದಂತೆ ನಾನೆಂದೂ ಮಾತಿಗೆ ತಪ್ಪುವುದಿಲ್ಲ. ರಾಜ್ಯದ ಜನರಿಗೆ ನೀಡಿದ ಗ್ಯಾರಂಟಿಯ ಭರವಸೆಯನ್ನು ಈಡೇರಿಸಿದ್ದೇನೆ. ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಆಗಮಿಸಲಿದ್ದು, ಶನಿವಾರ ಅವರನ್ನು ಭೇಟಿಯಾಗುವ ನಿರೀಕ್ಷೆ ಇದೆ ಎಂದರು.

### ಇಂದು ಖರ್ಗೆ ಜೊತೆಗೆ ಸಿಎಂ ಮಾತುಕತೆ



ಸದ್ಯದ ರಾಜಕೀಯ ಬೆಳವಣಿಗೆ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಶನಿವಾರ ಆಗಮಿಸಲಿದ್ದು, ಸದಾಶಿವ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖರ್ಗೆ ಅವರನ್ನು ಭೇಟಿ ಮಾಡಲಿದ್ದಾರೆ. ಖರ್ಗೆ ಜೊತೆಗೆ ಸದ್ಯದ ರಾಜಕೀಯ ಬೆಳವಣಿಗೆಗಳ ಕುರಿತಾಗಿ ಅವರು ಚರ್ಚೆ ನಡೆಸುವ ಸಾಧ್ಯತೆ ಇದೆ. ಹೀಗಾಗಿ ಖರ್ಗೆ ಅವರನ್ನು ಸಿದ್ದರಾಮಯ್ಯ ಅವರು ಭೇಟಿ ಮಾಡುತ್ತಿರುವುದು ಸಾಕಷ್ಟು ಕುತೂಹಲ ಕೆರಳಿಸಿದೆ.

# ನಾಳೆ ಚಿತ್ರಕಲಾ ಶಿಕ್ಷಕರ ಸಮ್ಮೇಳನ, ಚಿತ್ರಕಲಾ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಚಿತ್ರಕಲಾ ಶಿಕ್ಷಕರ 15ನೇ ಶೈಕ್ಷಣಿಕ ಸಮ್ಮೇಳನ ಹಾಗು ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ನ.23ರಂದು ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ವೈ.ಬಿ.ರವಿ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಉದ್ಘಾಟನೆಯನ್ನು ಲಲಿತಾ ಅಕಾಡೆಮಿ ಸದಸ್ಯ ಹೆಚ್.ಎಸ್. ಮಂಜುನಾಥ್ ಅವರು ನೆರವೇರಿಸುವರು. ಮುಖ್ಯ ಅತಿಥಿಯಾಗಿ ಚಿತ್ರಕಲಾ ಮಹಾವಿದ್ಯಾಲಯ ನಿವೃತ್ತ ಪ್ರಾಂಶುಪಾಲ ಎನ್.ನಾಗೇಶ್, ಕಾರ್ಯ ದರ್ಶಿ ಹೆಚ್.ಎಂ.ರಮೇಶ್, ಹೊಯ್ಸಳ ಚಿತ್ರಕಲಾ ಪರಿಷತ್ತು ಶಿಕ್ಷಕ ಕೆ.ಎನ್.ಶಂಕರಪ್ಪ, ಶಿಕ್ಷಕ ವೈ.ಹೆಚ್.ಜಯರಾಂ ಪಾಲ್ಗೊಳ್ಳಲಿದ್ದಾರೆ ಎಂದರು.

ವಿದ್ಯಾರ್ಥಿಗಳ ಕಲಾತ್ಮಕ ಪ್ರತಿಭೆ ಹೊರಹೊಮ್ಮಿಸಲು ಚಿತ್ರರಚನಾ ಸ್ಪರ್ಧೆ ನಡೆಯಲಿದೆ. ಪ್ರತಿ ವರ್ಗದ ಮಕ್ಕಳಿಂದ ವಿಭಿನ್ನ ವಿಷಯಗಳ ಆಧಾರದ ಮೇಲೆ ಚಿತ್ರಕಲೆ ಕೃತಿಗಳನ್ನು ನಿರೀಕ್ಷಿಸ ಲಾಗಿದೆ. ಚಿತ್ರ ರಚನೆಗಾಗಿ 1★4 ಅಳತೆಯ ಡ್ರಾಯಿಂಗ್ ಪೇಪರ್ ಮಾತ್ರ ಸಂಸ್ಥೆಯಿಂದ ನೀಡ ಲಾಗುತ್ತದೆ. ಬಣ್ಣ, ಬ್ರಷ್ ಹಾಗು ಇತರ ಕಲಾಪರಿಕರಗಳನ್ನು ಭಾಗವಹಿಸುವ ವಿದ್ಯಾರ್ಥಿಗಳೇ ತರಬೇಕು. ಯಾವುದೇ ಮಾಧ್ಯಮದಲ್ಲಿ ಚಿತ್ರ ರಚಿಸಬಹುದು. ಪ್ರತಿ ವಿಭಾಗಕ್ಕೆ ಪ್ರಥಮ, ದ್ವಿತೀಯ, ತೃತೀಯ ಹಾಗೂ 2 ಸಮಾಧಾನಕರ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗು ವುದು. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ವರ್ಣರಂಜಿತ ಪ್ರಶಂಸನಾ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಮಕ್ಕಳು 25 ರೂ. ಶುಲ್ಕ ನೀಡಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.




ಚಿತ್ರಕಲಾ ನಿವೃತ್ತ ಶಿಕ್ಷಕ ಬಿ.ಎಸ್.ದೇಸಾಯಿ ಅವರು ಮಾತನಾಡಿ, ಎಲ್.ಕೆ.ಜಿ, ಯುಕೆಜಿ, 1-2ನೇ ತರಗತಿ ಮಕ್ಕಳು ಇಷ್ಟವಾದ ಚಿತ್ರ ಬಿಡಿಸಬಹುದಾಗಿದೆ. 3-4 ಮತ್ತು 5-6ನೇ ತರಗತಿ ಯವರು ಪರಿಸರ ಚಿತ್ರ, 7-8ನೇ ತರಗತಿ ವಿದ್ಯಾರ್ಥಿಗಳು ಜಾನಪದ ಕಲೆಗಳು, 9- 10ನೇ ತರಗತಿ ಮಕ್ಕಳು ಹಬ್ಬ, ಜಾತ್ರೆ, ಉತ್ಸವ ಕುರಿತು ಚಿತ್ರ ಬಿಡಿಸಬಹುದಾಗಿದೆ. ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದೆ. ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ನಿವೃತ್ತ ಶಿಕ್ಷಕರಿಗೆ ಸನ್ಮಾನ ಮಾಡುವರು. ಅಧ್ಯಕ್ಷತೆಯನ್ನು ಡಿಡಿಪಿಐ ಕೆ.ಎನ್.ಬಲರಾಮ್ ವಹಿಸಲಿದ್ದಾರೆ ಎಂದರು. ಹೆಚ್.ಎಂ. ರಮೇಶ್, ಲಿಂಗರಾಜು ಇದ್ದರು.

# ಭಾವನಾತ್ಮಕವೈಭವೀಕರಣಕ್ಕಿಂತಸಾಧ್ಯತೆಗಳುಮುಖ್ಯವಾಗಬೇಕು

• ಪ್ರಜೋದಯ ವರದಿ

**ಬೇಲೂರು:** ಪ್ರಾದೇಶಿಕ ಭಾಷೆಗಳ ಸಾಧ್ಯತೆಗಳನ್ನು ಮನಗಾಣದೆ, ಕೇವಲ ಭಾವನಾತ್ಮಕವಾಗಿ ವೈಭವೀಕರಿಸುವ ನಡೆಯಿಂದಲೇ ಭಾಷೆಗಳು ನಿರಂತರ ಹೋರಾಟಕ್ಕೆ ಅಂಟಿಕೊಂಡಿವೆ. ಡಿಜಿಟಲ್ ಜಗತ್ತಿನ ವೇಗಕ್ಕೆ ಹೊಂದಿಕೊಂಡು, ಆಡು ಭಾಷೆಯ ಹೊಳಹುಗಳನ್ನು ಗಟ್ಟಿಗೊಳಿಸಿಕೊಂಡಲ್ಲಿ ಕನ್ನಡವೇ ಅನ್ನದ ದಾರಿಯಾಗುವಲ್ಲಿ ಅನುಮಾನವಿಲ್ಲ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪ್ರಯತ್ನಶೀಲರಾಗಬೇಕೆಂದು ಕವಯತ್ರಿ ಡಾ.ಭವ್ಯನವೀನ್ ಅವರು ಹೇಳಿದರು.

ಪಟ್ಟಣದ ವೈ.ಡಿ ಡಿ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ ಕಾರ್ಯಕ್ರಮದಲ್ಲಿ ಆಧುನಿಕ ಜಗತ್ತಿನಲ್ಲಿ ಕನ್ನಡದ ಸಾಧ್ಯತೆಗಳು ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದ ಅವರು, ಕನ್ನಡಕ್ಕಿಂತ ಕನ್ನಡತನ ಮುಖ್ಯವಾಗುವ ಕಾಲದಲ್ಲಿ ನಾವಿದ್ದೇವೆ. ಜಾಗತಿಕ ಸಾಂಸ್ಕೃತಿಕತೆ, ಮಾಹಿತಿ ಮತ್ತು ಮನರಂಜನೆಯನ್ನು ಕನ್ನಡಕ್ಕೆ ಒಗ್ಗಿಸಿ ಕೊಡುವುದೇ ಇಂದು ಅತ್ಯಂತ ದೊಡ್ಡ ವೃತ್ತಿಪರ ಅವಕಾಶವಾಗಿದೆ ಎಂದ ಅವರು ಡಿಜಿಟಲ್ ಲೋಕದಲ್ಲಿನ ಹಲವು ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು.




ಕರ್ನಾಟಕ ಸಾಹಿತ್ಯ ಅಕಾಡೆಮಿ ಜಿಲ್ಲಾ ಸಂಚಾಲಕ ಡಾ.ಹೆಚ್.ಎಲ್. ಮಲ್ಲೇಶಗೌಡ ಅವರು ಮಾತನಾಡಿ, ಕನ್ನಡ ನಾಡು ನುಡಿಯ ಮುನ್ನಡೆಸುವಲ್ಲಿ ವಿದ್ಯಾರ್ಥಿಗಳ ಪಾತ್ರ ಹಿರಿದು. ಅವರಲ್ಲಿ ಕನ್ನಡದ ಅಧ್ಯಯನಶೀಲತೆಯ ಕೊರತೆ ಹೆಚ್ಚಿದೆ. ಅದಕ್ಕೆ ಇಂದಿನ ಶಿಕ್ಷಣ ವ್ಯವಸ್ಥೆ ಮತ್ತು ಶಾಲಾ-ಕಾಲೇಜುಗಳ ಭಾಷಾ ನಿರ್ಲಕ್ಷ್ಯವೇ ಮುಖ್ಯ ಕಾರಣವೆಂದು ಅಭಿಪ್ರಾಯಪಟ್ಟರು.

ಸಂಚಾಲಕಿ ಸುಜಾತ ಹೆಚ್.ಆರ್. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮ್ಯ ಕನ್ನಡದಲ್ಲಿನ ಸೊಗಸಿನ ಬಗ್ಗೆ ಹೇಳುತ್ತ, ತಮ್ಮ ತಮ್ಮ ಭಾಷೆಯ ಸೊಗಡನ್ನು ಉಳಿಸಿ ಕೊಳ್ಳುವುದೇ ಕನ್ನಡವನ್ನು ಬೆಳೆಸುವ ದಾರಿ. ಆ ನಿಟ್ಟಿನಲ್ಲಿ ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ ಎಂದರು.

ಪ್ರಾಂಶುಪಾಲ ಹೆಚ್.ಎಂ. ಮಹೇಶ್, ಐಕ್ಯುಎಸಿ ಸಂಚಾಲಕ ಡಾ.ನಾಗೇಂದ್ರಪ್ಪ, ಕನ್ನಡ ವಿಭಾಗದ ಮುಖ್ಯಸ್ಥ ಮಂಜುನಾಥ್, ಮರಿಯಾ ಪಿಂಟೊ, ವೀರಭದ್ರಪ್ಪ, ವಸಂತಕುಮಾರ್, ಡಾ.ಮಧು, ಸುಮಂತ್ ಕುಮಾರ್, ಪವಿತ್ರ ಮೊದಲಾದ ಅಧ್ಯಾಪಕರು ಹಾಜರಿದ್ದರು.

## ಪಾಲಿಕೆ ಅಧಿಕಾರಿಗಳ ದಾಳಿ: 2 ಟಿಪ್ಪರ್ ಪ್ಲಾಸ್ಟಿಕ್ ವಶ

» ಮೊದಲನೇ ಪುಟದಿಂದ

ವ್ಯಾಪಕವಾಗಿ ಬಳಕೆಯಾಗುತ್ತಿರುವುದು ಕಂಡು ಬಂದಿತ್ತು. ಇದರ ಜೊತೆಗೆ, ಆಹಾರದ ರುಚಿ ಹೆಚ್ಚಿಸುವ ನೆಪದಲ್ಲಿ ಟೇಸ್ಟಿಂಗ್ ಪೌಡರ್ ಬಳಸುತ್ತಿರುವ ಹೋಟೆಲ್‌ಗಳ ಸಂಖ್ಯೆಯೂ ಹೆಚ್ಚು ಎನ್ನುವುದು ಪರಿಶೀಲನೆಯಲ್ಲಿ ಬಹಿರಂಗವಾಯಿತು. ಮಕ್ಕಳಿಗೆ, ವೃದ್ಧರಿಗೆ, ರಕ್ತದೊತ್ತಡ ಹಾಗೂ ಅಲರ್ಜಿ ಇರುವವರಿಗೆ ಇದು ಹಾನಿಕರ. ವ್ಯಾಪಾರಸ್ಥರು ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದರು.

ಪಾಲಿಕೆಯ ಆರೋಗ್ಯ ನಿರೀಕ್ಷಕ ಆದಿಶ್ ಕುಮಾರ್ ಮಾತನಾಡಿ, ನಗರದಲ್ಲಿ ಪ್ಲಾಸ್ಟಿಕ್ ಸಂಪೂರ್ಣ ನಿಷೇಧಿತ. ಆದರೂ ವ್ಯಾಪಾರಸ್ಥರು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಇದು ಪರಿಸರಕ್ಕೂ, ಆರೋಗ್ಯಕ್ಕೂ ಹಾನಿ. ಇಂದಿನ ದಾಳಿಯಲ್ಲಿ ನಿಯಮ ಉಲ್ಲಂಘಿಸಿದ ಅಂಗಡಿಗಳಿಗೆ 8 ಸಾವಿರ ರೂ.ವರೆಗೆ ದಂಡ ವಿಧಿಸಲಾಗಿದೆ. ಮುಂದೆ ಇದೇ ತಪ್ಪು ಕಂಡುಬಂದರೆ ಅಂಗಡಿಯನ್ನು ನೇರವಾಗಿ ಸೀಜ್ ಮಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ನಗರದ ಮತ್ತಷ್ಟು ಬಡಾವಣೆಗಳಲ್ಲಿ ಇಂತಹ ಇಂತಹ ಪ್ಲಾಸ್ಟಿಕ್‌ಗಳನ್ನ ಬಳಸಲಾಗುತ್ತಿದೆ ಮತ್ತು ಆಹಾರ ಪದಾರ್ಥದಲ್ಲಿ ಟೇಸ್ಟಿಂಗ್ ಪೌಡರ್‌ಗಳನ್ನು ಉಪಯೋಗಿಸಲಾಗುತ್ತಿದ್ದು, ಅದರ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಪಾಲಿಕೆಯ ಮುಖ್ಯ ಆರೋಗ್ಯ ನಿರೀಕ್ಷಕ ಶಶಿರಾಜ ಅರಸ್, ತುಳಸಿ ಪ್ರಸಾದ್, ದೀಪಕ್, ಪ್ರಸಾದ್ ಇದ್ದರು.

# ರೈತರಿಗೆ ನೈಸರ್ಗಿಕ, ಸಾವಯವ, ಸಹಜ ಕೃಷಿ ವಿಧಾನ ತಿಳಿಸುತ್ತಿಲ್ಲ

» ಮೊದಲನೇ ಪುಟದಿಂದ

50-70 ಕ್ವಿಂಟಾಲ್ ಕೊಬ್ಬರಿ ಬರುತ್ತಿದೆ. ಅಡಿಕೆ ಮರಗಳಿಂದ 12 ಟನ್ ಉತ್ಪಾದನೆ ನಿರೀಕ್ಷೆಯಲ್ಲಿದ್ದಾರೆ. ಈ ಕೃಷಿ ಪದ್ಧತಿಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂದರು.

ಸಾವಯವ ಹಾಗು ಸಮಗ್ರ ಕೃಷಿಯಲ್ಲಿ ಯಶಸ್ಸು ಕಂಡಿರುವ ರೈತ ಬಸವರಾಜು ಅವರು ಮಾತನಾಡಿ, 5 ದಶಕಗಳಿಂದ ಕೃಷಿಯಲ್ಲಿದ್ದೇನೆ. ನನ್ನ ಐದು ಎಕರೆ ತೋಟದಲ್ಲಿ ತೆಂಗು, ಅಡಿಕೆ, ಬಾಳೆ, ಕಾಳುಮೆಣಸು ಸೇರಿ ಹಲವು ಬೆಳೆಯನ್ನು ಉಳಿಮೆ ಇಲ್ಲದೆ ಬೆಳೆಸಿದ್ದೇನೆ. ಕೃಷಿಯಲ್ಲಿ ತಂತ್ರಜ್ಞಾನಕ್ಕಿಂತ ಮಾಡುವ ವಿಧಾನ ಮುಖ್ಯ. ಕೇವಲ ಔಷಧಿ ಸಿಂಪಡಣೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಎಂಬ ಭ್ರಮೆಯಿಂದ ರೈತರು ಹೊರಬರಬೇಕು. ನೈಸರ್ಗಿಕ ಫಲವತ್ತತೆಯನ್ನು ಬಳಸಿಕೊಂಡಾಗ ಕೃಷಿ ಭವಿಷ್ಯ ಸಮೃದ್ಧವಾಗುತ್ತದೆಂದು ಹೇಳಿದರು.

ರೈತರು ಕೃಷಿಯಲ್ಲಿ ಬದಲಾವಣೆ ಎಂಬ ಹೆಸರಿನಲ್ಲಿ ಮಣ್ಣಿನ ನೈಸರ್ಗಿಕ ಫಲವತ್ತತೆ ನಾಶ ಮಾಡುತ್ತಿದ್ದಾರೆ. ರಾಸಾಯನಿಕಗಳ ಅತಿಹೆಚ್ಚು ಬಳಕೆ ಮುಂದುವರೆದರೆ ಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳಲಿದೆ. ಆದ್ದರಿಂದ ರೈತರು, ತಜ್ಞರು ಹಾಗು ವಿಜ್ಞಾನಿಗಳು ನೈಸರ್ಗಿಕ ಮತ್ತು ಸಾವಯವ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಭೂಮಿಗೆ ಯಥೇಚ್ಛವಾಗಿ ವಿಷಕಾರಿ ರಾಸಾಯನಿಕ ಸೇರಿಸುವ ಮೂಲಕ ಕೃಷಿಯನ್ನು ಕಗ್ಗಂಟು ಮಾಡುವುದರ ಜೊತೆಗೆ ದೇಶದಲ್ಲಿ ಕ್ಯಾನ್ಸರ್ ಹೆಚ್ಚಲು ಕೃಷಿ ವಿಜ್ಞಾನಿಗಳೇ ಕಾರಣರಾಗಿದ್ದಾರೆ.ಭೂಮಿಗೆ ರಾಸಾಯನಿಕ ಬಳಕೆ ಯಿಂದ ಸೂಕ್ಷ್ಮ ಜೀವಿಗಳು ಸಾಯುತ್ತಿವೆ. ಮಣ್ಣಿನ ಮೇಲೆ ನಿತ್ಯ ಪ್ರಯೋಗ ಮಾಡಿ, ಅದರ ಸತ್ವವನ್ನೇ ಹಾಳು ಮಾಡಲಾಗುತ್ತಿದೆಂದು ಬೇಸರ ಹೊರ ಹಾಕಿದರು.

ತೋಟ ನಿರ್ವಹಣೆಗೆ ಉಳುಮೆ ಬೇಕಿಲ್ಲ. ಬದಲಾಗಿ ಎಲ್ಲವನ್ನೂ ಹಿತ, ಮಿತವಾಗಿ ಬಳಕೆ ಮಾಡಬೇಕು. ಹಿರಿಯರು ಹಿಂದೆ ಮಾಡುತ್ತಿದ್ದ ಅನುಭವದ ಕೃಷಿಗೆ ಒತ್ತು ನೀಡಿದರೆ ಯಾವುದೇ ನಷ್ಟವಾಗುವುದಿಲ್ಲ. ಈಗಿನ ಆರ್ಗ್ಯಾನಿಕ್ ಪದ್ಧತಿ ಎಂಬುದು ಬರೀ ಸುಳ್ಳು ಎಂದ ಅವರು, ಆಹಾರ ಧಾನ್ಯ ಬೆಳೆಯುವ ರೈತರು ವರ್ಷಕ್ಕೆ ಬೇರೆ ಬೇರೆ ಎಂಬಂತೆ ಪರ್ಯಾಯ ಬೆಳೆಯಲು ಸಲಹೆ ನೀಡಿದರು. ರಾಘವೇಂದ್ರ, ಅಬ್ದುಲ್ ರಿಜ್ವನ್, ಬಾಲರಾಜು ಹಾಜರಿದ್ದರು.

# ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಡೆಯನ್ನು ವಿರೋಧಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಶುಕ್ರವಾರ ನಗರದ ಹೇಮಾವತಿ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಚೈತ್ರ ಅವರು ಮಾತನಾಡಿ, ರಾಜ್ಯ ಸರ್ಕಾರವು ರಾಜ್ಯದಲ್ಲಿ 700 ಕೆಪಿಎಸ್-ಮ್ಯಾಗ್ನೆಟ್ ಶಾಲೆಗಳನ್ನು ಆರಂಭಿಸಲು ನಿರ್ಧರಿಸಿದೆ. ಆದೇಶಗಳಲ್ಲಿ ತಿಳಿಸಿರುವಂತೆ ಮ್ಯಾಗ್ನೆಟ್ ಶಾಲೆಯ 35 ಕಿಲೋ ಮೀಟರ್ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ಈ ಶಾಲೆಗಳಿಗೆ ಸಮೀಕರಣಳಿಸಲಾಗುತ್ತದೆ. ಮುಖವಾಡ ಹೊತ್ತಿರುವ ಈ ಹೊಸ ಯೋಜನೆಯು ಮತ್ತೊಂದು ವಂಚನೆಯ ಪ್ರಯತ್ನವಾಗಿದೆ ಎಂದು ಆರೋಪಿಸಿದರು.

ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ 5,900 ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಆರಂಭಿಸುವ ಉದ್ದೇಶವನ್ನು ಹೊಂದಿದೆ. ಹೀಗಾದಲ್ಲಿ ಸರ್ಕಾರಿ ಪದವಿ ಕಾಲೇಜು ಸೇರಿ 40,000 ಸರ್ಕಾರಿ ಶಾಲೆಗಳು ಮುಚ್ಚಿ ಹೋಗುವ ಅಪಾಯಕ್ಕೆ ತುತ್ತಾಗುತ್ತವೆ ಎಂದು ದೂರಿದರು.

ಸರ್ಕಾರವು ಈ ಹಿಂದೆ, ಸಾರ್ವಜನಿಕ ಒತ್ತಡ ಹಾಗು ಶಿಕ್ಷಕರ, ವಿದ್ಯಾರ್ಥಿಗಳ, ಪೋಷಕರ ಮತ್ತು ಶಿಕ್ಷಣ ತಜ್ಞರಿಂದ ವ್ಯಾಪಕ ಪ್ರತಿಭಟನೆಗಳ ನಂತರ, ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ ಅಥವಾ ವಿಲೀನಗೊಳಿಸುವುದಿಲ್ಲವೆಂದು ಭರವಸೆ ನೀಡಿತ್ತು. ಆದಾಗ್ಯೂ, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಕೆಪಿಎಸ್ ಶಾಲೆಯನ್ನು ಸ್ಥಾಪಿಸುವ ಈ ಯೋಜನೆಯನ್ನು ಪರಿಚಯಿಸುವ ಮೂಲಕ, ಸರ್ಕಾರವು ಮತ್ತೊಮ್ಮೆ ಸಂಪನ್ಮೂಲಗಳನ್ನು ಕೇಂದ್ರೀಕರಿಸಿ, ಸಣ್ಣ ಮತ್ತು ಗ್ರಾಮೀಣ ಶಾಲೆಗಳನ್ನು ಕೊನೆಗಾಣಿಸಲು ಮತ್ತು ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಯ ವ್ಯವಸ್ಥೆಯನ್ನೇ ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು.




ಶಾಲೆಗಳಿಗೆ ಮರುನಾಮಕರಣ ಮಾಡುವುದು ಅಥವಾ ಪುನರ್ರಚಿಸುವ ಬದಲಿಗೆ, ಪ್ರತಿಯೊಂದು ಸರ್ಕಾರಿ ಶಾಲೆಯನ್ನು ಸಾಕಷ್ಟು ಶಿಕ್ಷಕರು, ಮೂಲಸೌಕರ್ಯ, ಕಲಿಕಾ ಸಾಮಾಗ್ರಿಗಳು ಮತ್ತು ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಯೊಂದಿಗೆ ಬಲಪಡಿಸಬೇಕು. ಶಿಕ್ಷಣವು ಮೂಲಭೂತ ಹಕ್ಕು ಮತ್ತು ಸಾಮಾಜಿಕ ಜವಾಬ್ದಾರಿ ಯಾಗಿದೆ. ಅದನ್ನು ವೆಚ್ಚ ಕಡಿತ ಅಥವಾ ಕಾರ್ಪೋರೇಟ್-ಶೈಲಿಯ ನಿರ್ವಹಣೆಗಾಗಿ ಬಲಿಕೊಡಲು ಸಾಧ್ಯವಿಲ್ಲ. ಕೆಪಿಎಸ್ ಯೋಜನೆಯನ್ನು ತಕ್ಷಣ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಎಐಡಿಎಸ್‌ಓ ಸಹ ಸಂಚಾಲಕ ಸುಷ್ಮಾ, ಕಾರ್ಯಕರ್ತರಾದ ಮೋಹನ್, ಅಭಿಷೇಕ್, ಆರ್ಯನ್, ಧನರಾಜ್, ಚಿಂತನ, ರಂಗನಾಥ್, ದಿವ್ಯ, ಗೀತಾಂಜಲಿ, ನಿಶಾ ಮತ್ತು ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮಾಡಾಳು ಸ್ವರ್ಣಗೌರಿ ಅಮಾವಾಸ್ಯೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಮಾಡಾಳು:** ಗ್ರಾಮದ ಪುರಾಣ ಪ್ರಸಿದ್ಧ ಪುಣ್ಯ ಕ್ಷೇತ್ರ ಮೂಲಸ್ಥಾನ ಶ್ರೀ ಸ್ವರ್ಣಗೌರಮ್ಮ ದೇವಿ ದೇವಾಲಯದಲ್ಲಿ ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜೆಯನ್ನು ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯೊಂದಿಗೆ ಸಲ್ಲಿಸಲಾಯಿತು.

ಲೋಕ ಕಲ್ಯಾಣಾರ್ಥವಾಗಿ ಸಂಪ್ರದಾಯದಂತೆ ಪ್ರತಿ ತಿಂಗಳು ಅಮಾವಾಸ್ಯೆಯಂದು ಗ್ರಾಮದ ಹೊರ ಭಾಗದ ಶಿವಬಸವ ಕುಮಾರ ಆಶ್ರಮ ರಸ್ತೆ ಬದಿಯಿರುವ ಶ್ರೀ ಸ್ವರ್ಣಗೌರಮ್ಮ ದೇವಿಗೆ ವಿಶೇಷ ಪೂಜೆಯನ್ನು ಧಾರ್ಮಿಕ ವಿಧಿ ವಿಧಾನಗಳಿಂದ ಶಾಸ್ತ್ರೋಕ್ತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಪೂಜೆ ಹಿನ್ನಲೆ ದೇವಾಲಯವನ್ನು ತಳಿರು ತೋರಣ, ಬಾಳೆ ಕಂದುಗಳಿಂದ ಶೃಂಗರಿಸಲಾಗಿತ್ತು. ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸಿದ್ದು, ನೋಡುಗರ ಕಣ್ಮನ ಸೆಳೆಯಿತು.

ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಅಮ್ಮನವರಿಗೆ ಕುಂಕುಮಾರ್ಚನೆ ಹಾರನಹಳ್ಳಿ ಕೋಡಿ ಮಠದ ಮಹಾ ತಪಸ್ವಿ ಲಿಂಗೈಕ್ಯ ಶಿವಲಿಂಗಜ್ಜಯ್ಯ ಅವರ ಮೂರ್ತಿಗೆ ಹಾಗು ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿವರೆಗೆ ರುದ್ರಾಭಿಷೇಕ



ಸಹಸ್ರ ಬಿಲ್ವಾರ್ಚನೆಯನ್ನು ಪುರೋಹಿತರು ಭಕ್ತರ ಸಮ್ಮುಖದಲ್ಲಿ ಧಾರ್ಮಿಕ ವಿಧಿ ವಿಧಾನಗಳಿಂದ ನೆರವೇರಿಸಿದರು.

ಸಂಜೆ 8:30ಕ್ಕೆ ಸರಿಯಾಗಿ ಸ್ವರ್ಣ ಗೌರಮ್ಮ ದೇವಿಯವರಿಗೆ ಪೂಜೆ ಸಲ್ಲಿಸಿ ಕರ್ಪೂರದಾರತಿ ಸಲ್ಲಿಸಲಾಯಿತು. ನಂತರ ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ಭಕ್ತವೃಂದದವರಿಂದ ಬಂದ ಭಕ್ತಾಧಿಗಳಿಗೆ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮಾಡಾಳು ಗ್ರಾಮ ಸೇರಿ ಸೀತಾಪುರ ಕೊಪ್ಪಲು, ಡಿ.ಎಂ.ಕುರ್ಕೆ ಶಶಿವಾಳ, ರಾಂಪುರ, ಹೊಳಲ್ಕೆರೆ, ಹರಳಕಟ್ಟ, ವೈ.ಜಿ.ಹಳ್ಳಿ, ಪಿ.ಹೊಸಹಳ್ಳಿ, ಕಿತ್ತನಕೆರೆ, ದೊಣನಕಟ್ಟೆ, ಬೊಮ್ಮ ಸಮುದ್ರ, ಶಂಕರನಹಳ್ಳಿ, ಕಡಲಮಗೆ ಗ್ರಾಮಗಳಿಂದ ನೂರಾರು ಮಂದಿ ಆಗಮಿಸಿ ದೇವಿ ದರ್ಶನ ಪಡೆದು ಪುನೀತರಾದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK